ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಆಗಸ್ಟ್ 12 ಮಂಗಳವಾರ 2025 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 117 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮದರ್‌ಹುಡ್ ಆಸ್ಪತ್ರೆಯಲ್ಲಿ ಅವಧಿಗೂ ಮುನ್ನ ಜನಿಸಿದ ಎರಡು ಶಿಶುಗಳಿಗೆ ಮರುಜೀವ



ಅವಧಿ ಪೂರ್ವ ಜನಿಸಿದ ಮಕ್ಕಳ ಆರೋಗ್ಯವನ್ನು ಮದರ್‌ಹುಡ್ ಆಸ್ಪತ್ರೆಯ ಪ್ರಸೂತಿ ತಜ್ಞರು ಪರಿಶೀಲಿಸುತ್ತಿರುವುದು.

ಮೈಸೂರು,ಆ.11(ಎಂಟಿವೈ)– ಅವಧಿಗೂ ಮುನ್ನ ಜನಿಸಿದ ಎರಡು ಶಿಶುಗಳಿಗೆ ಮೈಸೂರಿನ ಮದರ್‌ಹುಡ್ ಆಸ್ಪತ್ರೆ ಅತ್ಯಾಧುನಿಕ ಚಿಕಿತ್ಸೆಯ ಮೂಲಕ ಮರುಜೀವ ನೀಡಲಾಗಿದೆ ಎಂದು ಪ್ರಸೂತಿ ತಜ್ಞೆ ಡಾ.ಶ್ವೇತಾ ನಾಯಕ್ ತಿಳಿಸಿದ್ದಾರೆ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ದಂಪತಿಯ ಮಗುವಿನ ಬೆಳವಣಿಗೆ ಆರಂಭದಲ್ಲಿ ಚೆನ್ನಾಗಿತ್ತು. ಆದರೆ, ಐದು ತಿಂಗಳ ಬಳಿಕ ತೀವ್ರ ಕುಂಠಿತವಾಯಿತು. ಮಿದುಳು ಸೇರಿದಂತೆ ದೇಹದ ಅಂಗಾಂಗಗಳ ಬೆಳವಣಿಗೆ ಸರಿಯಾಗಿ ಆಗಿರಲಿಲ್ಲ. ಉಸಿರಾಟದ ಸಮಸ್ಯೆಯೂ ಇತ್ತು. ಹೀಗಾಗಿ 29 ವಾರಗಳಿಗೇ ಸಿಜೇರಿಯನ್ ಮೂಲಕ ಹೆರಿಗೆ ಮಾಡಿಸಲಾಯಿತು. ಜನನದ ಸಮಯದಲ್ಲಿ ಮಗುವಿನ ತೂಕ ಕೇವಲ 480 ಗ್ರಾಂ ಇತ್ತು. ಅಂದರೆ ಕೇವಲ ಅಂಗೈ ಅಗಲದ ಗಾತ್ರ ಹೊಂದಿತ್ತು. ಇದಲ್ಲದೇ ಹಲವು ಸಮಸ್ಯೆ ಕಂಡು ಬಂದಿದ್ದವು ಎಂದರು.

ನಂತರ ಸಿಎಂಎ ಸೈಟೊಮೆಗಾಲೊ ವೈರಸ್ ಸೋಂಕು, ಫಂಗಲ್ ಸೆನ್ಸಸ್, ಸಿವಿಯರ್ ಫೀಡ್ ಇಂಟಾಲರೆನ್ಸ್, ಅವಧಿಗೆ ಮುನ್ನ ಜನಿಸಿದ ಶಿಶುಗಳಲ್ಲಿ ಉಂಟಾಗುವ ಕಣ್ಣಿನ ರಕ್ತನಾಳಗಳ ತೊಂದರೆ ಇತ್ತು. ಈ ಸಂಕೀರ್ಣ ತೊಂದರೆಗಳಿದ್ದರೂ ನಮ್ಮ ಎನ್‌ಐಸಿಯು ತಂಡ ಉತ್ತಮ ವಾಗಿ ಹಾರೈಕೆ ಮಾಡಿ ದುರ್ಬಲ ಅಂಗಗಳು ಬೆಳವಣಿಗೆಯಾಗುವಂತೆ ನೋಡಿಕೊಂಡರು. 84 ದಿನಗಳ ಕಾಲ ಎನ್‌ಐಸಿಯುನಲ್ಲಿ ಚಿಕಿತ್ಸೆ ನೀಡಲಾಯಿತು. ಈಗ ಮಗುವಿಗೆ 7 ತಿಂಗಳಾಗಿದ್ದು, ಯಾವುದೇ ತೊಂದರೆಯಿಲ್ಲದೆ ಆರೋಗ್ಯವಾಗಿದೆ. ಈ ಪ್ರಕರಣ ನನ್ನ ಹೃದಯಕ್ಕೆ ಬಹಳ ಹತ್ತಿರವಾದುದು. ಮಗುವನ್ನು ಉಳಿಸಿಕೊಳ್ಳುವಲ್ಲಿ ನಮ್ಮ ಪ್ರಯತ್ನದೊಂದಿಗೆ ಪೋಷಕರ ಬೆಂಬಲ, ಧೈರ್ಯವೂ ಸಹಕಾರಿಯಾಯಿತು ಎಂದರು.

ಮತ್ತೊಂದು ಪ್ರಕರಣದಲ್ಲಿ ದಂಪತಿಯ ಮಗು ಗರ್ಭಾವಸ್ಥೆಯ 24 ವಾರಗಳಲ್ಲೇ ಜನಿಸಿತ್ತು. ಕೇವಲ 750 ಗ್ರಾಂ ತೂಕವಿದ್ದ ಮಗುವನ್ನು ಜನಿಸಿದ ಮೂರು ಗಂಟೆಗಳ ಒಳಗೆ ತೀವ್ರ ನಿಗಾ ಘಟಕದ ಪರಿಫೆರಲ್ ಸೆಂಟರ್‌ಗೆ ಸಾಗಿಸಲಾಗಿತ್ತು. ಮಗು ಬದುಕುಳಿಯುವ ಸಾಧ್ಯತೆ ತೀರಾ ಕಡಿಮೆಯಿರುತ್ತದೆ. ಗೋಲ್ಡನ್ ಅವರ್‌ನಲ್ಲಿ ಗಂಭೀರ ಹಾಗೂ ಮಗುವಿನ ಸ್ಥಿತಿಯನ್ನು ಸ್ಥಿರಗೊಳಿಸುವ ಚಿಕಿತ್ಸೆಯ ಕೊರತೆಯಿಂದ ಈ ಶಿಶುವಿಗೆ ಮಿದುಳಲ್ಲಿ ರಕ್ತಸ್ರಾವವಾಗಿತ್ತು, ಶಿಶುವನ್ನು 84 ದಿನಗಳಕಾಲ ಎನ್‌ಐಸಿಯು ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಲಾಯಿತು. ಇದರಿಂದ ಮಗು ಆರೋಗ್ಯವಾಗಿದೆ ಎಂದು ತಿಳಿಸಿದರು.

ಈ ಚಿಕಿತ್ಸೆಯಲ್ಲಿ ಆಸ್ಪತ್ರೆಯ ಸಂಚಾರಿ ಎನ್‌ಐಸಿಯು ಘಟಕ ಪ್ರಮುಖ ಪಾತ್ರ ವಹಿಸಿದೆ. ಮಗುವಿಗೆ ಪ್ರಯಾಣದ ಸಮಯದಲ್ಲೂ ಚಿಕಿತ್ಸೆ ನೀಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ನವಜಾತ ಶಿಶು ತೀವ್ರ ನಿಗಾ ಘಟಕದಲ್ಲಿ ಸಾವಿರಕ್ಕೂ ಹೆಚ್ಚಿನ ಪ್ರಕರಣಗಳಲ್ಲಿ ಶೇ.70ಕ್ಕೂ ಹೆಚ್ಚಿನ ಶಿಶುಗಳನ್ನು ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಿಂದ ಕರೆತರಲಾಗಿದೆ ಎಂದು ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ವೈದ್ಯರಾದ ಡಾ.ಚೇತನ್.ಬಿ, ಡಾ.ಸುಹೇವ್ ಅಫ್ಸರ್ ಉಪಸ್ಥಿತರಿದ್ದರು.

ತುಳಸಿಗಿಡ ಹಿಂದೂ ಧರ್ಮದಲ್ಲಿ ಪರಮಶ್ರೇಷ್ಠ

ಶಾಸಕ ಹರೀಶ್‌ಗೌಡರ ಭಾವ



ರಾಯರ ಸನ್ನಿಧಿಯಲ್ಲಿ ಭಕ್ತಾದಿಗಳಿಗೆ ಶಾಸಕ ಹರೀಶ್‌ಗೌಡ ತುಳಸಿಗಿಡ ವಿತರಿಸಿದರು.

ಮೈಸೂರು,ಆ.11–ಶ್ರೀ ಗುರುರಾಘವೇಂದ್ರ ಸ್ವಾಮಿಗಳ 355ನೇ ವರ್ಧಂತಿ ಅಂಗವಾಗಿ ನಾರಾಯಣಶಾಸ್ತ್ರಿ ರಸ್ತೆ ಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಶಾಸಕ ಹರೀಶ್‌ಗೌಡರು ಭೇಟಿ ನೀಡಿ ರಾಯರ ಆಶೀರ್ವಾದ ಪಡೆದರು.

ಈ ವೇಳೆ ಭಕ್ತಾದಿಗಳಿಗೆ ತುಳಸಿ ಗಿಡ ವಿತರಿಸಿ ಮಾತನಾಡಿದ ಅವರು, ತುಳಸಿ ಗಿಡವು ಹಿಂದೂ ಧರ್ಮದಲ್ಲಿನ ಜನರಿಗೆ ಅವಿಭಾಜ್ಯ ಅಂಗ. ಇದನ್ನು ಮನೆಯಲ್ಲಿ ಬೆಳೆಸಿ ಬಳಸಿದರೆ ವಿವಿಧ ಕಾಯಿಲೆಗಳು ಬರುವುದಿಲ್ಲ. ಹಾಗೇ ತುಳಸಿಗಿಡವು ಯಥೇಚ್ಛವಾಗಿ ಆಮ್ಲಜನಕವನ್ನು ಉತ್ಪತ್ತಿ ಮಾಡುತ್ತದೆ. ಆದ್ದರಿಂದ ಅಂದಿನ ದಿನಗಳಲ್ಲಿ ರಾಯರು ಸಹಾ ತುಳಸಿ ಗಿಡದ ಮಹತ್ವವನ್ನು ಜಗಕ್ಕೆ ಸಾರಿದ್ದರು. ಆದ್ದರಿಂದಲೇ ಅವರು ಬೃಂದಾವನದಲ್ಲಿ ಲೀನವಾದರು ಎಂದು ರಾಯರನ್ನು ಸ್ಮರಿಸಿದರು. ತುಳಸಿ ಗಿಡದ ಎಲೆಗಳನ್ನು ಬಳಸಿದರೆ ಡೆಂಗ್ಯೂ ಕಾಯಿಲೆಯೂ ವಾಸಿಯಾಗುತ್ತದೆ ಎಂದರು.

ನವೀನ್, ಮಹದೇವ್, ನಾಗರಾಜು, ಸಂದೀಪ್, ಮಂಜುಳಾ, ಮಂಜು, ಶ್ರೀಕಾಂತ್ ಕಶ್ಯಪ್, ಮಂಜುನಾಥ್, ರವಿಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಕೃಷ್ಣಧಾಮದಲ್ಲಿ ರಾಯರ ಆರಾಧನೋತ್ಸವ



ಶ್ರೀ ಕೃಷ್ಣಧಾಮದಲ್ಲಿ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ ಆಚರಿಸಲಾಯಿತು.

ಮೈಸೂರು, ಆ. 11– ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣಾಪುರ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ ಅದ್ದೂರಿಯಾಗಿ ಆಚರಿಸಲಾಯಿತು.

ಬೆಳಗ್ಗೆ 7ಕ್ಕೆ ರಾಯರಿಗೆ ಪಂಚಾಮೃತ ಅಭಿಷೇಕ, 9.30ಕ್ಕೆ ಪಾದಪೂಜೆ. ಕಣಕಾಭಿಷೇಕ, 11.30ಕ್ಕೆ ಅಲಂಕಾರ ಸೇವೆ, 12.30ಕ್ಕೆ ಮಹಾಮಂಗಳಾರತಿ ಹಾಗೂ ಬಂದಂತ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ, ಸಂಜೆ 7.30 ಕ್ಕೆ ರಾಯರ ಪಲ್ಲಕ್ಕಿ ಸೇವೆ, ರಾಜಬೀದಿಯಲ್ಲಿ ರಥೋತ್ಸವ, ರಂಗ ಪೂಜೆ ತೊಟ್ಟಿಲುಸೇವೆ ನೆರವೇರಿತು. ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಎನ್.ಗೋಪಾಲ ಕೃಷ್ಣನ್, ಉಪಾಧ್ಯಕ್ಷ ಶ್ರೀವಾತ್ಸರಾವ್, ಕಾರ್ಯದರ್ಶಿ ಗುರುಪ್ರಸಾದ್, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿಶಾಸ್ತ್ರಿ, ಪಿ.ಎಸ್.ಶೇಖರ್, ಕೆ.ವಿ.ಶ್ರೀಧರ್, ಮಾಜಿ ಅಧ್ಯಕ್ಷ ಮೋಹನ್, ಸಮಿತಿ ಪದಾಧಿಕಾರಿಗಳು ಹಾಜರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಹುಟ್ಟುಹಬ್ಬದ ಪ್ರಯುಕ್ತ ಮಾವುತರು, ಕಾವಾಡಿಗರಿಗೆ ಪಾರಂಪರಿಕ ಉಡುಗೆ ವಿತರಣೆ



ಮಾವುತರಿಗೆ, ಕಾವಾಡಿಗರಿಗೆ ಮೈಸೂರು ಯುವ ಬಳಗದ ವತಿಯಿಂದ ಪಾರಂಪರಿಕ ಉಡುಗೆ ಪಂಚೆ, ಶಲ್ಯ, ಶರ್ಟ್ ವಿತರಿಸಲಾಯಿತು.

ಮೈಸೂರು, ಆ. 11– ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ತಂಡದ ಮಾವುತರಿಗೆ, ಕಾವಾಡಿಗರಿಗೆ ಮೈಸೂರು ಯುವ ಬಳಗದ ವತಿಯಿಂದ ಪಾರಂಪರಿಕ ಉಡುಗೆ ಪಂಚೆ, ಶಲ್ಯ, ಶರ್ಟ್ ವಿತರಿಸಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಕರ್ನಾಟಕದ ಜನತೆಗೆ ನುಡಿದಂತೆ ನಡೆದ ಮುಖ್ಯಮಂತ್ರಿಯಾಗಿ ಪ್ರತಿಂಯೊಂದು ಮನೆ–ಮನಗಳಿಗೆ ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿ, ಪಾರದರ್ಶಕ ಆಡಳಿತದ ಮೂಲಕ ಜನ ಮಾನಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತುತ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಅವರ ಹುಟ್ಟುಹಬ್ಬದ ಪ್ರಯುಕ್ತ ದಸರಾ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಿಯನ್ನ ಅಂಬಾರಿಯಲ್ಲಿ ಹೊತ್ತು ಸಾಗುವ ಮಾವುತರು, ಕಾವಾಡಿಗರಿಗೆ ಪಾರಂಪರಿಕ ಉಡುಗೆಯಾದ ಪಂಚೆ, ಶಲ್ಯ, ಶರ್ಟ್ ವಿತರಿಸಿ ಉಪಹಾರದೊಂದಿಗೆ ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ. ಸಿದ್ದರಾಮಯ್ಯನವರು ನನಗೆ ರಾಜಕಾರಣಕ್ಕೆ ಬರಲು ಪ್ರೇರಣೆಯಾದರು. ರಾಜ್ಯದಲ್ಲಿ ಸಾವಿರಾರು ಮಂದಿಯನ್ನು ವಿವಿಧ ಕ್ಷೇತ್ರದಲ್ಲಿ ಬೆಳೆಸಿ ಮುಖ್ಯವಾಹಿನಿಗೆ ತರುವಲ್ಲಿ ಸಿದ್ದರಾಮಯ್ಯ ಶ್ರಮಿಸಿದ್ದಾರೆ. ಅವರನ್ನು ಆದರ್ಶವಾಗಿ ಪಾಲಿಸಿ ಸಂಘಟನಾತ್ಮಕವಾಗಿ ಯುವಸಮೂಹ ಮುಂದಾಗುತ್ತಿರುವುದು ಶ್ಲಾಘನೀಯ ಎಂದರು. ಡಿಸಿಎಫ್ ಪ್ರಭು, ಅರಮನೆ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ನದೀಮ್, ಟ್ರಾಫಿಕ್ ಸಬ್ ಇನ್ಸ್‌ಪೆಕ್ಟರ್ ಪ್ರಭು, ನವೀನ್, ಸಂದೀಪ್, ನಿತಿನ್, ಶಿಮಾಮು, ಜಗದೀಶ್, ಹೇಮಂತ್, ರವಿಚಂದ್ರ, ಹರ್ಷ, ನಿರೂಪಕ ಅಜಯ್ ಶಾಸ್ತ್ರಿ ಇನ್ನಿತರರು ಹಾಜರಿದ್ದರು.

ಇಂದು ಗ್ರಂಥಪಾಲಕರ ದಿನಾಚರಣೆ

ಮೈಸೂರು,ಆ.11–ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಜನ್ಮದಿನವಾದ ಆ.12 ಅನ್ನು ರಾಜ್ಯ ಸರ್ಕಾರದಿಂದ ಗ್ರಂಥಪಾಲಕರ ದಿನಾಚರಣೆ ಎಂದು ಘೋಷಿಸಲಾಗಿದ್ದು, ಮೈಸೂರು ನಗರ, ಜಿಲ್ಲಾ ಕೇಂದ್ರ ಗ್ರಂಥಾಲಯದ ಸಂಯುಕ್ತಾಶ್ರಯದಲ್ಲಿ 2025ನೇ ಸಾಲಿನಲ್ಲಿ ಗ್ರಂಥಪಾಲಕರ ದಿನಾಚರಣೆ ಪ್ರಯುಕ್ತ ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ಬೆಳಿಗ್ಗೆ 10.30 ಗಂಟೆಗೆ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಗ್ರಂಥಾಲಯದ ಸಿಬ್ಬಂದಿಗೆ ಹಾಗೂ ಸಾರ್ವಜನಿಕ ಓದುಗರಿಗೆ ಪೋಲೀಸ್ ನಿರೀಕ್ಷಕ ಷಣ್ಮುಗ ಅವರು ಸೈಬರ್ ಕ್ರೈಂ ಕುರಿತು ಉಪನ್ಯಾಸ ನೀಡುವರು. ಮೇನಕ ಆನಂದ ಕುಮಾರ್ ಅವರಿಂದ ಗ್ರಾಫೋಲಜಿಗೆ ಸಂಬಂಧಿಸಿದಂತೆ ಉಪನ್ಯಾಸ ನೀಡುವರು. ಸುಮಾ ರಾಜ್‌ಕುಮಾರ್ ಅವರಿಂದ ಮ್ಯಾಜಿಕ್ ಷೋ ಹಾಗೂ ಗ್ರಂಥಾಲಯ ಸಿಬ್ಬಂದಿ, ಸಾರ್ವಜನಿಕರಿಂದ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಆರಾಧನೆ; ಸುತ್ತೂರು ಶ್ರೀಗಳಿಗೆ ಪುಷ್ಪ ನಮನ...



ಮೈಸೂರು ತಾಲೂಕು ವರುಣ ಹೋಬಳಿ ಜಂತಗಳ್ಳಿಯಲ್ಲಿರುವ ಶ್ರೀ ಕಲ್ಪವೃಕ್ಷ ಕ್ಷೇತ್ರ ರಾಯರ ಮಠದಲ್ಲಿ ರಾಯರ ಪೂರ್ವಾರಾಧನೆ ಅಂಗವಾಗಿ ವಿಶೇಷ ಪೂಜೆ, ಅಲಂಕಾರ, ಪ್ರಸಾದ ವಿನಿಯೋಗ ನೆರವೇರಿತು. ಇದೇ ವೇಳೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳಿಗೆ ವಿಶೇಷ ಪಾದಪೂಜೆ, ಗುರುವಂದನಾ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ 'ಲಾ ಗೈಡ್' ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ, ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಹಿರಿಯ ನ್ಯಾಯವಾದಿ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಇನ್ನಿತರರು ಶ್ರೀಗಳಿಗೆ ಪುಷ್ಪವೃಷ್ಟಿಗರೆದು, ಆಶೀರ್ವಾದ ಪಡೆದರು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 12 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 117 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸೆಪ್ಟೆಂಬರ್ ಕ್ರಾಂತಿ ಭವಿಷ್ಯ ನುಡಿದಿದ್ದ... ಕೆ.ಎನ್.ರಾಜಣ್ಣ ತಲೆದಂಡ

ಕಾಂಗ್ರೆಸ್ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಿ ಸಚಿವ ಸ್ಥಾನದಿಂದ ವಜಾಗೊಂಡ ನೇರ... ದಿಟ್ಟ... ನಾಯಕ!

ಬೆಂಗಳೂರು, ಆ.11(ಕೆಎಂಶಿ)– ಕಾಂಗ್ರೆಸ್‌ನಲ್ಲಿ ಸೆಪ್ಟೆಂಬರ್ ಕ್ರಾಂತಿಯ ಭವಿಷ್ಯ ನುಡಿದು ತಲ್ಲಣ ಉಂಟು ಮಾಡಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣರ ತಲೆದಂಡವಾಗಿದೆ.

ನಿರಂತರ ವಿವಾದಾತ್ಮಕ ಹೇಳಿಕೆಗಳ ಹಿನ್ನೆಲೆಯಲ್ಲಿ ಹೈಕಮಾಂಡ್ ಸೂಚನೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಣ್ಣರನ್ನು ಸಂಪುಟದಿಂದ ಕೈಬಿಟ್ಟಿದ್ದಾರೆ. ಮುಖ್ಯಮಂತ್ರಿಗಳ ಶಿಫಾರಸ್ಸು ಮೇರೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಟ್ಟಿರುವುದನ್ನು ಅನುಮೋದಿಸಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಇಂದು ಸಂಜೆ ಪತ್ರ ರವಾನಿಸಿದ್ದಾರೆ.

ವಿವರ: ಇತ್ತೀಚೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬೆಂಗಳೂರಿಗೆ ಬಂದು ಬೆಂಗಳೂರು ಕೇಂದ್ರ ■10ನೇ ಪುಟಕ್ಕೆ

ನಾನು ವಜಾ ಆಗುವುದರ ಹಿಂದೆ ಷಡ್ಯಂತ್ರ, ಕುತಂತ್ರವಿದೆ!

ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಿರುವ ಅನುಮೋದನಾ ಪತ್ರ ಎಲ್ಲರಿಗೂ ತಿಳಿದಿದೆ. ಅದರ ಬಗ್ಗೆ ನಾನು ಹೇಳಬೇಕಿಲ್ಲ. ಪಕ್ಷದ ಹೈಕಮಾಂಡ್ ಹೇಳಿದಂತೆ ಮುಖ್ಯಮಂತ್ರಿಗಳು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ನನಗೆ ಸಚಿವನಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿದ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದ್ದೇನೆ. ಯಾವುದು ಏನೇ ಇರಲಿ ನಾನು ಹೈಕಮಾಂಡ್‌ಗೆ ಬದ್ಧನಾಗಿರುತ್ತೇನೆ. ನಾನು ಈಗ ಮಾಜಿ ಸಚಿವನಾಗಿದ್ದೇನೆ. ಅದಕ್ಕೆ ಸಂತೋಷಪಡುತ್ತೇನೆ. ನಾನು ಮಾಜಿ ಸಚಿವನಾಗಲು ಷಡ್ಯಂತ್ರ ಕುತಂತ್ರ ಎಲ್ಲವೂ ನಡೆದಿದೆ. ಯಾರು ಷಡ್ಯಂತ್ರ ಮಾಡಿದ್ದಾರೆ, ಯಾರ್ಯಾರ ಜೊತೆ ಮಾತನಾಡಿದ್ದಾರೆ ಎಲ್ಲವನ್ನೂ ಕಾಲ ಬಂದಾಗ ಹೇಳುತ್ತೇನೆ. ನಾನು ಪಕ್ಷದ ತೀರ್ಮಾನವನ್ನು ಪ್ರಶ್ನಿಸುವವನಲ್ಲ. ರಾಹುಲ್ ಗಾಂಧಿ ದೇಶದ ನಾಯಕರು. ಮತಗಳ್ಳತನದ ಬಗ್ಗೆ ಮಾತನಾಡಿದ್ದಾರೆ. ನಾವು ಅವರ ಜೊತೆ ನಿಲ್ಲಬೇಕು. ರಾಹುಲ್ ಗಾಂಧಿ, ವೇಣುಗೋಪಾಲ್ ಮತ್ತು ನಮ್ಮ ಅಧ್ಯಕ್ಷರಿಗೆ ನನ್ನ ಬಗ್ಗೆ ಉಂಟಾಗಿರುವ ತಪ್ಪು ಗ್ರಹಿಕೆಯನ್ನು ನಿವಾರಣೆ ಮಾಡಲು ನಾನು ಹಿರಿಯ ಸಚಿವರು, ಶಾಸಕರುಗಳೊಂದಿಗೆ ದೆಹಲಿಗೆ ತೆರಳುತ್ತೇನೆ. ಪಕ್ಷದ ವರಿಷ್ಠರ ಮಾರ್ಗದರ್ಶನದಂತೆ ಮುಂದುವರೆಯುತ್ತೇನೆ. - ಕೆ.ಎನ್.ರಾಜಣ್ಣ, ಮಾಜಿ ಸಚಿವ



ಸಚಿವ ಸ್ಥಾನಕ್ಕೆ ಕಂಟಕವಾದ ರಾಜಣ್ಣರ ವಿವಾದಾತ್ಮಕ ಹೇಳಿಕೆಗಳು...!

- ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಆಗಲೇಬೇಕು...
- ಡಿಸಿಎಂ ಹುದ್ದೆ ಸಾಂವಿಧಾನಿಕ ಹುದ್ದೆಯಲ್ಲ...
- ಹೆಚ್ಚುವರಿಯಾಗಿ ನಾಲ್ಕು ಡಿಸಿಎಂ ಹುದ್ದೆ ಸೃಷ್ಟಿಸಿ, ಎಲ್ಲಾ ವರ್ಗದವರಿಗೂ ಅವಕಾಶ ಕಲ್ಪಿಸಿ...
- ನನ್ನನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಲು ನಮ್ಮವರೇ ಪ್ರಯತ್ನಿಸಿದರು...
- ರಾಜ್ಯದಲ್ಲಿ ಸೆಪ್ಟೆಂಬರ್‌ನಲ್ಲಿ ಕ್ರಾಂತಿಯಾಗಲಿದೆ...
- ಶಾಸಕರ ಸಭೆ ಕರೆದು ಅಭಿಪ್ರಾಯ ಪಡೆಯಲು ಸುರ್ಜೇವಾಲ ಯಾರು...?
- ಸುರ್ಜೇವಾಲ ಅಧಿಕಾರಿಗಳ ಸಭೆ ನಡೆಸಿರುವುದು ಸಂವಿಧಾನ ಬಾಹಿರವಾಗುತ್ತೆ...!
- ಸುರ್ಜೇವಾಲ ಕರೆದಿದ್ದ ಸಚಿವರ ಸಭೆಗೆ ರಾಜಣ್ಣ ಗೈರು ಹಾಜರಾಗಿ, ವಿದೇಶ ಪ್ರವಾಸ ಹೋಗಿದ್ದರು.
- ಲೋಕಸಭಾ ಚುನಾವಣೆ ವೇಳೆ ಮತದಾರರ ಪಟ್ಟಿ ತಯಾರಾದಾಗ ನಮ್ಮದೇ ಸರ್ಕಾರ ಅಧಿಕಾರದಲ್ಲಿತ್ತು. ಆಗ ಕಣ್ಮುಚ್ಚಿ ಕುಳಿತುಕೊಂಡು ಈಗ ಮಾತನಾಡಿ ಏನು ಪ್ರಯೋಜನ? ನಮ್ಮ ಅಧಿಕಾರಾವಧಿಯಲ್ಲೇ ಮತಗಳ್ಳತನ ಆಗಿದೆ ಎಂದರೆ ನಮಗೆ ನಾಚಿಕೆ ಆಗಬೇಕು....

ಕ್ಲೈಮ್ಯಾಕ್ಸ್...!

ವಿಧಾನಮಂಡಲ ಅಧಿವೇಶನ ಆರಂಭ

ಕಸ್ತೂರಿರಂಗನ್, ಸರೋಜಾದೇವಿ, ಸಿದ್ದಲಿಂಗಯ್ಯ, ವೆಂಕಟೇಶ್‌ಮೂರ್ತಿ ಸೇರಿ ಅಗಲಿದ ಗಣ್ಯರಿಗೆ ಉಭಯ ಸದನಗಳಲ್ಲಿ ಶ್ರದ್ಧಾಂಜಲಿ



ಬೆಂಗಳೂರು,ಆ.11(ಕೆಎಂಶಿ)– ಹಿರಿಯ ನಟಿ ಬಿ.ಸರೋಜಾದೇವಿ, ವಿಜ್ಞಾನಿ ಕಸ್ತೂರಿ ರಂಗನ್, ಸಾಹಿತಿಗಳಾದ ಜಿ.ಎಸ್.ಸಿದ್ದಲಿಂಗಯ್ಯ, ಹೆಚ್.ಎಸ್. ವೆಂಕಟೇಶ ಮೂರ್ತಿ, ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಕಾಲ್ತುಳಿತ ದುರಂತ, ಪಹಲ್ಗಾಮ್ ಉಗ್ರರ ದಾಳಿ ಮತ್ತು ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರು ಸೇರಿದಂತೆ ಇತ್ತೀಚೆಗೆ ನಿಧನರಾದ ಗಣ್ಯರಿಗೆ ವಿಧಾನಮಂಡಲದ ಉಭಯ ಸದನಗಳಲ್ಲಿಂದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಧಾನ ಮಂಡಲದ ಮಳೆಗಾಲದ ಅಧಿವೇಶನದ ಮೊದಲ ದಿನ ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್, ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚನಾ ನಿರ್ಣಯ ಮಂಡಿಸಿದರು.

ಮಾಜಿ ಸಚಿವ ಬೇಗಾನೆ ರಾಮಯ್ಯ, ವಿಧಾನಸಭೆಯ ಮಾಜಿ ಸದಸ್ಯರಾದ ಕಾಕಸೋ ಪಾಂಡುರಂಗ ಪಾಟೀಲ್, ಎನ್. ರಾಜಣ್ಣ, ವಿಧಾನಸಭೆಯ ಮಾಜಿ ನಾಮನಿರ್ದೇಶಿತ ಸದಸ್ಯ ಡೆರ್ರಿಕ್ ಎಂ.ಬಿ. ಫುಲಿನ್ಫಾ, ವಿಧಾನ ಪರಿಷತ್ತಿನ ಮಾಜಿ ಹಂಗಾಮಿ ಸಭಾಪತಿ ಡಾ.ಎನ್.ತಿಪ್ಪಣ್ಣ, ಮಾಜಿ ಹಂಗಾಮಿ ಸಭಾಪತಿ ಡೇವಿಡ್ ಸಿಮೆಯೋನ್, ರಾಜ್ಯಸಭೆಯ ಮಾಜಿ ಸದಸ್ಯ ಹಾಗೂ ಇಸ್ರೋ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿರಂಗನ್, ಖ್ಯಾತ ಕೃಷಿ ವಿಜ್ಞಾನಿ ಪ್ರೊ.ಸುಬ್ಬಣ್ಣ ಅಯ್ಯಪ್ಪನ್, ಅಣು ವಿಜ್ಞಾನಿ ಎಂ.ಆರ್. ಶ್ರೀನಿವಾಸನ್, ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರುಗಳ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಂತಾಪ ಸೂಚನಾ ನಿರ್ಣಯ ಬೆಂಬಲಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ ಆರ್.ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಅರಗ ಜ್ಞಾನೇಂದ್ರ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಅನೇಕ ಸದಸ್ಯರು ಮಾತನಾಡಿದರು. ನಂತರ ಮೃತರ ಗೌರವಾರ್ಥ ಸದನ ಒಂದು ನಿಮಿಷ ಮೌನ ಆಚರಿಸಿತು.

ಬಿಜೆಪಿ 18 ಶಾಸಕರ ಅಮಾನತು ಹಿಂದಕ್ಕೆ

ಬೆಂಗಳೂರು, ಆ.11(ಕೆಎಂಶಿ)– ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಆರೋಪದ ಮೇಲೆ ಬಿಜೆಪಿಯ 18 ಶಾಸಕರನ್ನು 6 ತಿಂಗಳು ಸದನ ಕಲಾಪದಿಂದ ಅಮಾನತುಗೊಳಿಸಿದ ನಿರ್ಣಯ ಹಿಂಪಡೆದಿರುವುದಾಗಿ ವಿಧಾನಸಭೆಯಲ್ಲಿ ಇಂದು ಘೋಷಿಸಲಾಯಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಹೆಚ್.ಕೆ.ಪಾಟೀಲ್, ಅಮಾನತು ನಿರ್ಣಯ ಹಿಂಪಡೆದ ಸ್ಥಿರೀಕರಣ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ, ಬಿಜೆಪಿ ಶಾಸಕರಾದ ದೊಡ್ಡನಗೌಡ ಪಾಟೀಲ್, ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಮುನಿರತ್ನ, ಬೈರತಿ ಬಸವರಾಜ್, ಎಸ್.ಆರ್. ವಿಶ್ವನಾಥ್, ಚನ್ನಬಸಪ್ಪ, ಉಮಾನಾಥ್ ಕೋಟ್ಯಾನ್, ಎಂ. ಆರ್.ಪಾಟೀಲ್, ಡಾ.ಭರತ್ ಶೆಟ್ಟಿ, ಬಿ.ಪಿ.ಹರೀಶ್, ಧೀರಜ್ ಮುನಿರಾಜು, ಡಾ.ಚಂದ್ರು ಲಮಾಣಿ, ಶರಣು ಸಲಗಾರ್, ಬಸವರಾಜ್ ಮತ್ತಿಮೋಡ್ ಸೇರಿದಂತೆ 18 ಶಾಸಕರನ್ನು ಅಮಾನತು ಮಾಡಲಾಗಿತ್ತು ಎಂದರು. ಅಮಾನತು ನಿರ್ಣಯವನ್ನು ಮೇ 25ರಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ದೇವರಾಜ ಅರಸು ಸಿದ್ದರಾಮಯ್ಯರಂತೆ ಮಾಸ್ ಲೀಡರ್ ಆಗಿರಲಿಲ್ಲ!

- ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅಭಿಪ್ರಾಯ
- ಸಿದ್ದರಾಮಯ್ಯ ದೇವೇಗೌಡರ ವಿರೋಧಿ; ಒಕ್ಕಲಿಗರ ವಿರೋಧಿಯಲ್ಲ



ಮೈಸೂರಿನ ಚಿಕ್ಕಗಡಿಯಾರ ಆವರಣದಲ್ಲಿ ಸೋಮವಾರ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ "ದಿ ಮಾಸ್ ಲೀಡರ್ ಸಿದ್ದರಾಮಯ್ಯ @ 78" ಕುರಿತ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ ಅವರು ಲಿಂಗತ್ವ ಅಲ್ಪಸಂಖ್ಯಾತರಿಗೆ 2ನೇ ಹಂತದ ವಿಮೆ ಬಾಂಡ್ ವಿತರಣೆ ಮಾಡಿದರು.

ಮೈಸೂರು, ಆ.11(ಬಿಎಲ್‌ಯು)– ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತೆ ಮಾಸ್ ಲೀಡರ್ ಆಗಿರಲಿಲ್ಲ ಎಂದು ಹಿರಿಯ ಪತ್ರಕರ್ತರೂ ಆದ ಮುಖ್ಯಮಂತ್ರಿಗಳ ಮಾಜಿ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಿಕ್ಕ ಗಡಿಯಾರದ ಆವರಣದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ "ದಿ ಮಾಸ್ ಲೀಡರ್ ಸಿದ್ದರಾಮಯ್ಯ @78" ಕಾರ್ಯಕ್ರಮದಲ್ಲಿ ರಾಜಕಾರಣದ ಸಾರ್ಥಕತೆಯಲ್ಲಿ ಸಿದ್ದರಾಮಯ್ಯ ವಿಚಾರ ಕುರಿತು ಮಾತನಾಡಿದರು.

ದೇವರಾಜ ಅರಸು ಸಣ್ಣ ಸಮುದಾಯಕ್ಕೆ ಸೇರಿದ ಕಾರಣ ಮಾಸ್ ಲೀಡರ್ ಆಗಲು ಸಾಧ್ಯವಾಗಲಿಲ್ಲ. ಇದರಿಂದ ರಾಜಕಾರಣದ ಸಂಕಷ್ಟದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ದೇವರಾಜ ಅರಸು ಉತ್ತಮ ಆಡಳಿತಗಾರರಾಗಿದ್ದರು ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಕೆಲವು ರಾಜಕಾರಣಿಗಳು ಮಾಸ್ ಲೀಡರ್ ಆಗಿದ್ದರೆ, ಉತ್ತಮ ಆಡಳಿತಗಾರರಾಗಲು ಸಾಧ್ಯವಾಗುವುದಿಲ್ಲ. ಉತ್ತಮ ಆಡಳಿತಗಾರರಾಗಿದ್ದರೆ, ಮಾಸ್ ಲೀಡರ್ ಪಟ್ಟ ಅವರಿಗೆ ಒದಗಿ ಬರುವುದಿಲ್ಲ ಪ್ರಧಾನಿಗಳಾಗಿದ್ದ ಪಿ.ವಿ.ನರಸಿಂಹರಾವ್ ■10ನೇ ಪುಟಕ್ಕೆ

ಪ್ರತಾಪ್ ಸಿಂಹ ಬಹಳಷ್ಟು ಸಲ ಸಿದ್ದರಾಮಯ್ಯ ಕೈ-ಕಾಲು ಹಿಡಿದಿದ್ದಾರೆ!

ಮಾಜಿ ಸಂಸದ ಪ್ರತಾಪ್‌ಸಿಂಹ ಅವರು ಬಹಳಷ್ಟು ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ–ಕಾಲು ಹಿಡಿದಿದ್ದಾರೆ ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು. ಸಿದ್ದರಾಮಯ್ಯ ಅವರ ಕೈ ಕಾಲು ಹಿಡಿಯುವ ಪ್ರತಾಪ್ ಸಿಂಹ ಅವರು, ನಂತರ ಅವರನ್ನೇ ಟೀಕೆ ಮಾಡುತ್ತಾರೆ. ಆನೆ ಹೋಗುವಾಗ ನಾಯಿ ಬೊಗಳುವುದು ಸಹಜ. ಆದರೆ ಸಿದ್ದರಾಮಯ್ಯ ಎಂಬ ಆನೆ ಯಾರೇ ಬೊಗಳಿದರೂ ಕೇರ್ ಮಾಡುವುದಿಲ್ಲ. ಪ್ರತಾಪ್ ಸಿಂಹ ಬೈಯ್ಯದೆ ಇರುವ ವ್ಯಕ್ತಿಗಳೇ ಇಲ್ಲ. ಬಿಜೆಪಿ ನಾಯಕರನ್ನು ನಿಂದಿಸುತ್ತಿದ್ದ ಪ್ರತಾಪ್ ಸಿಂಹ ಬಿಜೆಪಿಯವರನ್ನು ಬೇಡಿ ಲೋಕಸಭಾ ಚುನಾವಣೆಗೆ ಟಿಕೆಟ್ ತಂದರು ಎಂದು ಆರೋಪಿಸಿದರು.

ಮಾಜಿ ಸಚಿವ ಜನಾರ್ಧನ ರೆಡ್ಡಿ ಅವರನ್ನು ಬೈಯ್ಯುತ್ತಿದ್ದ ಪ್ರತಾಪ್ ಸಿಂಹ ಅವರು, ವೇದಿಕೆಯಲ್ಲಿ ಅದೇ ಜನಾರ್ಧನ ರೆಡ್ಡಿಯವರನ್ನು ಹೊಗಳುತ್ತಿದ್ದರು. ಇಂತಹ ವ್ಯಕ್ತಿ ಸಿದ್ದರಾಮಯ್ಯ ಅವರನ್ನು ಬೈಯ್ದರೆ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ರಾಜಣ್ಣ ನಿರ್ಗಮನದಿಂದ ಡಿಸಿಎಂ ಡಿಕೆಶಿ ಮತ್ತಷ್ಟು ಬಲಾಢ್ಯ!

ಬೆಂಗಳೂರು, ಆ.11(ಕೆಎಂಶಿ)– ಮಂತ್ರಿ ಸ್ಥಾನಕ್ಕೆ ಕೆ.ಎನ್. ರಾಜಣ್ಣ ರಾಜೀನಾಮೆ ಪ್ರಸಂಗದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತಷ್ಟು ಬಲಾಢ್ಯರಾಗಿದ್ದಾರೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.



ಆರ್.ಅಶೋಕ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆಪ್ಟೆಂಬರ್–ಅಕ್ಟೋಬರ್‌ಗೆ

ಸೆಪ್ಟೆಂಬರ್ ಕ್ರಾಂತಿ ಆಗಸ್ಟ್‌ನಲ್ಲೇ ಶುರುವಾಗಿದೆ!

ಕಾಂಗ್ರೆಸ್‌ನಲ್ಲಿ ಕ್ರಾಂತಿಯಾಗುತ್ತದೆ ಎಂದು ತಿಳಿಸಿದ್ದೆ. ಆದರೆ ಅದು ಆಗಸ್ಟ್‌ನಲ್ಲೇ ಆರಂಭಗೊಂಡಿದೆ. ಇನ್ನು ಮುಂದೆ ಸಿದ್ದರಾಮಯ್ಯ ಅವರ ಸಂಪುಟದ ಒಂದೊಂದೇ ವಿಕೆಟ್ ಪತನಗೊಳ್ಳಲಿದೆ ಎಂದು ಭವಿಷ್ಯ ನುಡಿದರು. ಇದಕ್ಕೂ ಮುನ್ನ ವಿಧಾನಸಭೆಯಲ್ಲಿ ಪ್ರಶ್ನೋತ್ತರ ಕಲಾಪಕ್ಕೂ ಮುನ್ನವೇ ಅಶೋಕ್, ಸಚಿವ ರಾಜಣ್ಣ ರಾಜೀನಾಮೆ ಪ್ರಸ್ತಾಪಿಸಿ, ■10ನೇ ಪುಟಕ್ಕೆ

ವಯಸಲ್ಲಿ ಕಿರಿಯನಾದರೂ ತೂಕದಲ್ಲಿ ಭೀಮ 'ಬಲಿಷ್ಠ'




ದಸರಾ ಗಜಪಡೆಗೆ ತೂಕದ ಪರೀಕ್ಷೆ

ಮೈಸೂರು, ಆ.11(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿರುವ ಗಜಪಡೆಯ ಮೊದಲ ತಂಡದ 9 ಆನೆಗಳಿಗೆ ಸಂಪ್ರದಾಯದಂತೆ ಅರಣ್ಯ ಇಲಾಖೆ ಸೋಮವಾರ ತೂಕದ ಪರೀಕ್ಷೆ ಮಾಡಿಸಿದ್ದು, ಭವಿಷ್ಯದ ಅಂಬಾರಿ ಆನೆ ಭೀಮ ತೂಕದಲ್ಲಿ ಹಾಲಿ ಅಂಬಾರಿ ಆನೆ ಅಭಿಮನ್ಯುವನ್ನು ಮೀರಿಸಿದ್ದಾನೆ.

ಸಂಪ್ರದಾಯದಂತೆ ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕಂ ತೂಕ ಕೇಂದ್ರದಲ್ಲಿ ದಸರಾ ಗಜಪಡೆಯ ಮೊದಲ ತಂಡದ 9 ಆನೆಗಳ ತೂಕ ಮಾಡಿಸಲಾಯಿತು. ಗಂಡಾನೆಗಳಲ್ಲಿ ಅತ್ಯಂತ ಕಿರಿಯ 25 ವರ್ಷದ ಭೀಮ ಈ ಬಾರಿ 5,465 ಕೆಜಿ ತೂಗುವ ಮೂಲಕ ಭಲೇ ಭೀಮನಾಗಿದ್ದಾನೆ. ಕಳೆದ ವರ್ಷ ಭೀಮ 4945 ಕೆಜಿ ತೂಗಿದ್ದ. ಗಜಪಡೆಯ ನಾಯಕ, ಅಂಬಾರಿ ಆನೆ ಅಭಿಮನ್ಯು 5360(ಕಳೆದ ವರ್ಷ 5560) ಕೆಜಿ ತೂಗಿ ಎರಡನೇ ಸ್ಥಾನದಲ್ಲಿದ್ದಾನೆ. ಧನಂಜಯ– 5310(5155), ಏಕಲವ್ಯ– 5305(4730), ಮಹೇಂದ್ರ– 5120(4910), ಪ್ರಶಾಂತ– 5110(4875), ಕಂಜನ್– 4880(4515), ಲಕ್ಷ್ಮಿ – 3730(2480), ಕಾವೇರಿ –3010 ಕೆಜಿ ತೂಕ ಹೊಂದಿದೆ.


ಎಲ್ಲಾ ಆನೆಗಳು ಆರೋಗ್ಯವಾಗಿವೆ: ಆನೆಗಳಿಗೆ ತೂಕದ ಪರೀಕ್ಷೆ ಬಳಿಕ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮಾತನಾಡಿ, ಇಂದು ಸಂಪ್ರದಾಯದಂತೆ ಗಜಪಡೆಯ ಮೊದಲ ತಂಡದ 9 ಆನೆಗಳಿಗೂ ತೂಕದ ಪರೀಕ್ಷೆ ಮಾಡಿಸಲಾಗಿದೆ. ಎಲ್ಲಾ ಆನೆಗಳು ಆರೋಗ್ಯದಿಂದಿವೆ. ಗಂಡಾನೆಗಳು 5 ಸಾವಿರ ಕೆಜಿ ತೂಕವಿರುವುದನ್ನು ಗಮನಿಸಿದರೆ ಆರೋಗ್ಯವಂತರಾಗಿರುವುದನ್ನು ■10ನೇ ಪುಟಕ್ಕೆ


















ನಕ್ಕರೆ ಅದೇ ಸ್ವರ್ಗ

ಗಂಡ : ನಾನು ತಪ್ಪಿಸಿಕೊಂಡ್ರೆ ನೀನೇನು ಮಾಡ್ತೀಯಾ?
ಹೆಂಡತಿ : ಪೇಪರ್‌ನಲ್ಲಿ ಜಾಹೀರಾತು ಕೊಡ್ತೀನಿ.
ಗಂಡ : ವಾಹ್! ಏನಂತ ಕೊಡ್ತೀಯಾ ಪೇಪರ್‌ನಲ್ಲಿ
ಹೆಂಡತಿ : ಗಂಡ ಬೇಕಾಗಿದ್ದಾನೆ.

ಮೈಸೂರು ಮಿತ್ರ

ಮಂಗಳವಾರ, 12 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸಮಸ್ಯೆಗಳಿಂದ ತಪ್ಪಿಸಿಕೊಂಡು ಬದುಕುವುದು ಜೀವನವಲ್ಲ...
ಸಮಸ್ಯೆಯೊಂದಿಗೆ ಬದುಕುವುದೇ ನಿಜವಾದ ಜೀವನ...


ವೇದ ಸುಳ್ಳಾದರೂ { ಹಣ್ಣೆಲೆ ನೋಡಿ
ಗಾದೆ ಸುಳ್ಳಾಗದು { ಚಿಗುರೆಲೆ ನಕ್ಕಿತಂತೆ!

ನಿಮ್ಮ ಪತ್ರಗಳು

ರಾಹುಲ್ ಗಾಂಧಿಯವರ ಮತಗಳವು ಆರೋಪಕ್ಕೆ ಚು.ಆಯೋಗದ ಉತ್ತರವೇನು?

ಮಾನ್ಯರೆ,

ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 1 ಲಕ್ಷಕ್ಕೂ ಹೆಚ್ಚು ನಕಲಿ ಮತದಾನವಾಗಿ ಆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜಯಗಳಿಸಿದ್ದಾರೆ. ಇದಕ್ಕೆ ನನ್ನ ಬಳಿ ಎಲ್ಲ ದಾಖಲೆಗಳಿವೆ ಎಂದು ಹೇಳಿರುವುದು ಯಾರೋ ಒಬ್ಬ ಸಾಮಾನ್ಯ ರಾಜಕಾರಣಿಯಲ್ಲ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಗಂಭೀರ ಆರೋಪ ಮಾಡಿದ್ದಾರೆ.



ಇದಕ್ಕೆ ಪೂರಕವಾಗಿ ಸಾಮಾನ್ಯ ಜನರೂ ನಂಬಬಹುದಾದ ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಲೋಕಸಭಾ ಕ್ಷೇತ್ರದ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮುಂದಿದ್ದರು. ಕಡೆಯಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯವು ನಡೆದಾಗ ಬಿಜೆಪಿ ಅಭ್ಯರ್ಥಿ ಸುಮಾರು ಒಂದು ಲಕ್ಷದ ಹದಿನಾಲ್ಕು ಸಾವಿರ ಮತ ಪಡೆದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಿಂತ, ಸುಮಾರು 32 ಸಾವಿರಕ್ಕೂ ಹೆಚ್ಚು ಮತಗಳಿಸುವುದರ ಮೂಲಕ, ಬಿಜೆಪಿ ಅಭ್ಯರ್ಥಿ ಜಯಗಳಿಸಿದ್ದಾರೆ. ಈ ಮತಗಳಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮತಗಳು ನಕಲಿ ಮತದಾನವಾಗಿದೆ ಎಂದು ಕಾಂಗ್ರೆಸ್ ಪಕ್ಷದ ಮುಖಂಡರು ಆರೋಪ ಮಾಡಿದ್ದಾರೆ.

ಹಿಂದಿನ, ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಈ ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎಷ್ಟು ಮತಗಳನ್ನು ಗಳಿಸಿವೆ ಎಂದು ಚುನಾವಣಾ ಆಯೋಗ ತನಿಖೆ ಮಾಡಬೇಕು. ರಾಹುಲ್ ಗಾಂಧಿ ಅವರು ಆರೋಪಿಸಿರುವುದು ಮಹದೇವಪುರ ವಿಧಾನಸಭಾ ಕ್ಷೇತ್ರದ ಒಂದೇ ಕಡೆ ಈ ರೀತಿ ಆಗಿಲ್ಲ ಹಲವು ವಿಧಾನಸಭಾ ಕ್ಷೇತ್ರದಲ್ಲಿ ಕಳ್ಳ ಮತದಾನ ನಡೆದಿದೆ ಎಂದು ಹೇಳಿದ್ದಾರೆ, ಈ ಬಗ್ಗೆ ಚುನಾವಣಾ ಆಯೋಗ ಏನು ಹೇಳುತ್ತದೆ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಸಾರಿಗೆ ಸಂಸ್ಥೆಗೆ ಬೇಕು ಬಲ

ಮಾನ್ಯರೆ,



ದೇಶದ ಯಾವುದೇ ರಾಜ್ಯ ನೋಡಿಕೊಂಡು ಬನ್ನಿ ಕರ್ನಾಟಕ ರಾಜ್ಯದಲ್ಲಿರುವ ಉತ್ತಮ ಬಸ್ ವ್ಯವಸ್ಥೆ ಬೇರೆ ಎಲ್ಲಿಯೂ ಇಲ್ಲ. ಆದರೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ 30 ಕಿ.ಮಿ ಮೇಲ್ಪಟ್ಟ ಗ್ರಾಮದ ಬಸ್‌ಗಳನ್ನು ನಿಯಮಿತ ನಿಲುಗಡೆಯ ವೇಗದೂತ ಸಾರಿಗೆಯನ್ನಾಗಿ ಮೇಲ್ದರ್ಜೆಗೇರಿಸಬೇಕು. ಆದರೆ 60–70 ಕಿ.ಮಿ ದೂರವಾದರೂ ಸಾಮಾನ್ಯ ಬಸ್‌ಗಳನ್ನಾಗಿ ಓಡಿಸುತ್ತಿದ್ದಾರೆ. ಇದರಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗುವುದಲ್ಲದೇ, ಸರ್ಕಾರಕ್ಕೆ ಹೊರೆಯಾಗಲಿದೆ. ಒಂದು ಬಸ್, ಒಂದು ಲೀಟರ್ ಡೀಸೆಲ್‌ಗೆ ಕೇವಲ 4 ಕಿ.ಮೀ ಮೈಲೇಜ್ ಕೊಡುವುದು. ಆದ್ದರಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ 30 ಕಿ.ಮಿ ಮೇಲ್ಪಟ್ಟ ಗ್ರಾಮದ ಬಸ್‌ಗಳ ಅನುಸೂಚಿಯನ್ನು ನಿಯಮಿತ ನಿಲುಗಡೆಯ ವೇಗದೂತ ಸಾರಿಗೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಗ್ರಾಪಂ, ಪಪಂ, ಪುರಸಭೆ, ನಗರಸಭೆ ನಗರ ಪಾಲಿಕೆಯನ್ನು ಮೇಲ್ದರ್ಜೆಗೇರಿಸುವ ಸರ್ಕಾರ ಸಾರಿಗೆ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದೆ. 30 ಕಿ.ಮೀ ಮೇಲ್ಪಟ್ಟ ಸಾಮಾನ್ಯ ಸಾರಿಗೆಯನ್ನು ನಿಯಮಿತ ನಿಲುಗಡೆಯ ವೇಗದೂತ ಸಾರಿಗೆಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಜರುಗಿಸಬೇಕು. ಸಾರಿಗೆ ಸಂಸ್ಥೆ ಉಳಿಸಿ, ಬೆಳೆಸುವುದಲ್ಲದೇ ಸಾರಿಗೆ ನೌಕರರ ಸಂಬಳ ಸರಿಯಾಗಿ ಪಾವತಿಸುವ ವ್ಯವಸ್ಥೆ ಮಾಡಿ.

–ವೀರೇಶ ಧೂಪದಮಠ, ಮೈಸೂರು.

ಅದೇ ರಾಗ... ಅದೇ ಹಾಡು...?

ಮಾನ್ಯರೆ,

ಇತ್ತೀಚೆಗೆ ನಡೆದ ಆಪರೇಷನ್ ಸಿಂಧೂರ (ಸಿಂಧೂರ ಎಂದರೆ ಆನೆ, ಸಿಂಧೂರ ಎಂದರೆ ತಿಲಕ ಎಂಬ ಅರ್ಥ ಎಂದು ಚಂದನದ ಥಟ್ ಅಂತಾ ಹೇಳಿ ಕಾರ್ಯಕ್ರಮದಲ್ಲಿ ನಾ ಸೋಮೇಶ್ವರ ಹೇಳಿದ್ದಾರೆ.) ಪಾಕ್‌ನ 6 ಯುದ್ಧ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಭಾರತದ ವಾಯುಸೇನಾ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು 3 ತಿಂಗಳ ನಂತರ ಹೇಳಿರುವುದು ಪತ್ರಿಕೆಗಳಲ್ಲಿ (10.8.25.)ವರದಿಯಾಗಿದೆ.

ಪಾಕ್ ದಾಳಿಯಿಂದ ಶ್ರೀನಗರ, ಅವಂತಿಪುರ, ಅದಂಪುರ ವಾಯುನೆಲೆಗೆ ತುಸು ಹಾನಿಯಾಗಿದೆ. ಆದರೆ ದೊಡ್ಡ ಪ್ರಮಾಣದ ಅವಶೇಷಗಳನ್ನು ಸಂಗ್ರಹಿಸಲಾಗಿದೆ ಎಂದಿದ್ದಾರೆ. ಆದರೆ ಭಾರತದ ಎಷ್ಟು ಯುದ್ಧ ವಿಮಾನಗಳು ಧ್ವಂಸವಾದವು ಎಂಬ ಬಗ್ಗೆ ಮಾಹಿತಿ ನೀಡಿಲ್ಲ. ಭಾರತದ 2 ಯುದ್ಧ ವಿಮಾನಗಳನ್ನು ಪಾಕ್ ನಾಶ ಮಾಡಿದೆ ಎಂದು ಹೇಳಿದ ವರದಿ ಬಿಬಿಸಿಯಲ್ಲಿ ಕೂಡ ವರದಿಯಾಗಿತ್ತು. ಅಥವಾ ನಮ್ಮ ಒಂದೂ ವಿಮಾನಕ್ಕೂ ಹಾನಿಯಾಗಿಲ್ಲ ಎಂದೂ ಕೂಡ ವಾಯುಸೇನಾ ಮುಖ್ಯಸ್ಥರು ತಿಳಿಸಿರುವುದಿಲ್ಲ. ಭಾರತದ ದಾಳಿಯಿಂದ ತಮ್ಮ ಒಂದೂ ಯುದ್ಧ ವಿಮಾನಕ್ಕೂ ಹಾನಿಯಾಗಿಲ್ಲ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜ ಆಸೀಫ್ ಕೂಡ ತಿಳಿಸಿದ್ದಾರೆ.ಹಾಗೆಯೇ ಭಾರತದ ರಫೇಲ್ ಯುದ್ಧ ವಿಮಾನವನ್ನು ಕೂಡ ತಾನು ಹೊಡೆದುರುಳಿಸಿರುವುದಾಗಿ ಪಾಕ್ ಹೇಳಿ ಕೊಂಡಿದೆ. ಇದು ಎರಡೂ ದೇಶಗಳ ಜನರನ್ನು ಗೊಂದಲಕ್ಕೆ ಕೆಡವಿದೆ. ಯುದ್ಧ ವಿರಾಮದ ನಂತರ ಎರಡೂ ದೇಶಗಳ ನಾಯಕರೂ ನಾವೇ ಗೆದ್ದಿದ್ದೇವೆ ಎಂದು ಬೀಗುತ್ತಿದ್ದಾರೆ. ಎರಡು ದೇಶಗಳೂ ವಾಸ್ತವ ವನ್ನು ಮರೆಮಾಚುತ್ತಿವೆ ಎನ್ನುವ ಅನುಮಾನ ಜನರನ್ನು ಕಾಡುತ್ತಿದೆ.

ಭಾರತದ 2 ಸಾವಿರ ಚದರ ಕಿಮೀ ಪ್ರದೇಶವನ್ನು ಚೀನಾ 2020 ರಲ್ಲಿ ವಶಪಡಿಸಿ ಕೊಂಡಿದೆ ಎಂದು ಗೂಗಲ್ ಮಾಹಿತಿ ತಿಳಿಸುತ್ತದೆ ರಾಹುಲ್ ಗಾಂಧಿ ಕೂಡ ಇದನ್ನೇ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು. ಹಾಗೆಯೇ 1962ರ ಯುದ್ಧದ ಸಮಯದಲ್ಲಿ ಭಾರತದ 38 ಸಾವಿರ ಚದರ ಕಿಮೀ ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡಿದೆ ಎನ್ನುವ ಮಾಹಿತಿಯೂ ಇದೆ. ಸರ್ಕಾರ ಇಂತಹ ವಿಷಯಗಳಲ್ಲಿ ಜನರಿಗೆ ನೈಜ ಮಾಹಿತಿಯನ್ನು ನೀಡಬೇಕು.

– ಮುಳ್ಳೂರು ಪ್ರಕಾಶ್, ಕನಕದಾಸನಗರ ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ


ಉದ್ಯೋಗ ನಿರೀಕ್ಷೆಯಲ್ಲೇ ನಿರುದ್ಯೋಗಿ ರೋಗಿ!

ರೋಗವಲ್ಲವಯ್ಯ ನಿರೋಗ,
ನಿರೋಗವಲ್ಲವಯ್ಯ ನಿರುದ್ಯೋಗ,
ನಿರುದ್ಯೋಗಿಗಳ ಪಾಡನ್ನು ಅದೇನೆಂದು ಹೇಳಲಯ್ಯ,
ಹೇಳುವಂತಿಲ್ಲ ಹೇಳದೆಯೂ ಇರುವಂತಿಲ್ಲ,
ಪದವಿಗಳ ಪಡೆದವರು,
ಪಡೆದ ಪದವಿಗಳಿಗೆ ತೂಗುವ
ಕೆಲಸವಿಲ್ಲದೆ ಪರದಾಡುತ್ತಿರುವವರು,
ಸರಕಾರಿ ನೌಕರಿಗೆ ಚಾತಕ ಪಕ್ಷಿಯಾದವರು,
ಖಾಸಗಿ ಉದ್ಯೋಗದಿ ಶಿಫಾರಸ್ಸು ಮಾಡಿಸಲು ಆಗದವರು,
ಅರಸಿ ಬಂದ ಇಲ್ಲವೇ ಅರಸಿ ಹೋದ
ಉದ್ಯೋಗದಿ ಅರಸನಂತೆ ಅಲ್ಲವಾದರೂ ಸೇವಕನಂತೆ ದುಡಿದರೂ
ಅಲ್ಲಿಯೂ ಶಾಂತ ಮನಸ್ಸುಗಳ ಕದಡುವ ಮಂದಿಗಳೊಂದಿಗೆ
ಏಗುವ ಭಾಗ್ಯಕ್ಕೆ ದೂಡಿದೆಯ
ಇಂತಹ ವಿಷಕಾರಿ ಸಮಾಜದಿ ಬದುಕುತ್ತಾ
ಪ್ರಾಮಾಣಿಕ ಪ್ರಯತ್ನದಿ ಸಫಲರಾಗದೇ ನೊಂದವರು ನಾವು
ನಿರುದ್ಯೋಗಿಗಳು ! ನಾವು ನಿರುದ್ಯೋಗಿಗಳು !!!

ಏನು ನಿನ್ನ ಮಗನಿಗೆ ಇನ್ನೂ ಕೆಲಸ ಸಿಕ್ಕಿಲ್ವ ? ಅಷ್ಟು ಓದಿದವನಿಗೆ ಕೆಲಸ ಸಿಗಲಿಲ್ಲ ಅಂದರೆ ಏನರ್ಥ ? ....

(ಕೆಲಸ ಸಿಕ್ಕಿಲ್ಲ ಅಂದರೆ ಸಿಕ್ಕಿಲ್ಲ ಅಂತಾನೇ ಅರ್ಥ ! ಇದಕ್ಕೆ ಬೇರೆ ಅರ್ಥ ಏನಿದೆಯೋ ಕನ್ನಡದಲ್ಲಿ ಆ ಶಿವನೇ ಬಲ್ಲ !??).

ಏನು ಕೆಲಸ ಮಾಡ್ತಾ ಇದ್ದೀಯಾ? ಓಹ್ ಅತಿಥಿ ಶಿಕ್ಷಕನಾ? ಉಪನ್ಯಾಸಕನಾ? ಖಾಸಗಿ ಕಂಪನಿಯಲ್ಲಿ ಕೆಲಸನಾ? ಎಷ್ಟು ಸಂಬಳ ..... ಏನು ಅಷ್ಟು ಓದಿ ಕೇವಲ ಹತ್ತು ಸಾವಿರ ಸಂಬಳನಾ?!..... ಇದು ಇತ್ತೀಚಿನ ದಿನಗಳಲ್ಲಿ ಗಮನಿಸಿದ ಹಾಗೆ ಕೇಳಿಬರುತ್ತಿರುವ ಮಾತುಗಳಿವು



ಓದಿಗೆ ತಕ್ಕಂತಹ ಕೆಲಸ ಸಿಗುತ್ತಿಲ್ಲ ಅಥವಾ ಸಿಕ್ಕರೂ ಕಡಿಮೆ ವೇತನ ಕೊಡುವ ಅದು ಸರಿಯಾದ ಸಮಯಕ್ಕೆ ಕೊಡದೆ ವಿಧಿಯಿಲ್ಲದೆ ಪರಿತಪಿಸುವವರು ಎಲ್ಲಾ ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸುತ್ತಿರುವ, ಕಾರ್ಯನಿರ್ವಹಿಸುವ ಜನರ ಹಣೇ ಬರಹವೇ ಹೀಗೆ ಎಂದು ಗೊಣಗುವ ಜನರನ್ನೂ, ನಮ್ಮ ಸುತ್ತ – ಮುತ್ತವೇ ನೋಡಬಹುದು. ಖಾಸಗಿ ಸಂಸ್ಥೆಗಳಲ್ಲಿ ಅಥವಾ ಖಾಸಗಿ ಶಾಲಾ–ಕಾಲೇಜುಗಳಾದರೆ ಕೇಳುವುದೇ ಬೇಡ ಅವರು ಹೇಳಿದ ಕೆಲಸವನ್ನೆಲ್ಲ ಮಾಡುತ್ತಾ ಅವರು ಕೊಡುವ ಅಲ್ಪ ಸಂಬಳದಲ್ಲೇ (ಭೀಮನಿಗೆ ಅರೆ ಹೊಟ್ಟೆ ಎನ್ನುವಂತೆ) ಬದುಕ ಬೇಕಾದ ಅನಿವಾರ್ಯತೆಯಲ್ಲಿ ಬದುಕನ್ನು ದೂಡಬೇಕಾಗಿದೆ.

ಹಾಗಾದರೆ ಇದಕ್ಕೆಲ್ಲಾ ಕಾರಣ ಏನಿರಬಹುದು ಎಂಬ ಪ್ರಶ್ನೆ ಹಾಕಿದರೆ ಸುಲಭವಾಗಿ ಸಿಗಬಹುದಾದ ಉತ್ತರವೊಂದೇ ಅದು ನಿರುದ್ಯೋಗ. ಹಾಗಾದರೆ ಈ ನಿರುದ್ಯೋಗ ಅಂದರೆ ಪದಶಃ ಅರ್ಥವೇನು ಎಂಬುದನ್ನು ನೋಡುವುದಾದರೆ? ಒಬ್ಬ ವ್ಯಕ್ತಿ ದುಡಿಯುವ ಸಾಮರ್ಥ್ಯವನ್ನು ಹೊಂದಿದ್ದು, ದುಡಿಯಲು ಬೇಕಾದ ಅರ್ಹತೆಯನ್ನು ಹೊಂದಿದ್ದರೂ ಸಹ ಅವನಿಗೆ ಕೆಲಸ ಸಿಗದ ಪರಿಸ್ಥಿತಿಯನ್ನು ನಿರುದ್ಯೋಗ' ಎಂದು ಕರೆಯಲಾಗುತ್ತದೆ.

ಜನಸಂಖ್ಯೆ ಹೆಚ್ಚಿರುವ, ಹೆಚ್ಚುತ್ತಿರುವ ದೇಶಗಳಲ್ಲಿ, ಅಭಿವೃದ್ಧಿ ಹೊಂದುತ್ತಿರುವ ನಮ್ಮ ಭಾರತದಂತಹ ದೇಶಗಳಲ್ಲಿ ನಿರುದ್ಯೋಗದ ಸಮಸ್ಯೆ ತೀವ್ರವಾಗಿ ಬೆಳೆಯುತ್ತಲೇ ಇದೆ. ನಿರುದ್ಯೋಗದ ಜೊತೆಗೆ ಅರೆ ನಿರುದ್ಯೋಗವೂ ಕಂಡುಬರುತ್ತಿದೆ ಅರೆ ನಿರುದ್ಯೋಗ ಎಂದರೆ ಸ್ವಲ್ಪ ಕಾಲ ಕೆಲಸವಿದ್ದು ನಂತರದ ದಿನಗಳಲ್ಲಿ ಕೆಲಸವಿಲ್ಲದ ಪರಿಸ್ಥಿತಿ.

ಉದಾಹರಣೆಗೆ:

1. ರೈತನಿಗೆ ಉದ್ಯೋಗ ಎಲ್ಲಾ ಕಾಲದಲ್ಲೂ ಸಿಗುವುದಿಲ್ಲ. ಮಳೆ ಬಂದಾಗ ಅಥವಾ ವರ್ಷದ ಕೆಲವು ತಿಂಗಳುಗಳ ವರೆಗೆ ಮಾತ್ರ ಕೆಲಸ ಇರುತ್ತದೆ.

2. ಖಾಸಗಿ ಶಾಲಾ ಶಿಕ್ಷಕ/ಉಪನ್ಯಾಸಕರಾದರೆ ಹತ್ತು ತಿಂಗಳು ಕೆಲಸ ಎರಡು ತಿಂಗಳು ಕೆಲಸವೂ ಇಲ್ಲ ಸಂಬಳವು ಇಲ್ಲ ಇಂತಹ ಪರಿಸ್ಥಿತಿಯನ್ನು ಅರೆ ನಿರುದ್ಯೋಗ ಎಂದು ಕರೆಯಲಾಗುತ್ತದೆ. ಹಾಗಾದರೆ ಈ ನಿರುದ್ಯೋಗಕ್ಕೆ ಕಾರಣವಾದರೂ ಏನು? ಎಂಬ ಪ್ರಶ್ನೆಯನ್ನು ಹಾಕಿದರೆ ಹಲವು ಉತ್ತರಗಳು ದೊರಕುವಂತಿದ್ದರೂ ಮುಖ್ಯವಾಗಿ ಕೆಲವು ಅಂಶಗಳನ್ನು ಗುರುತಿಸಿ ಹೇಳಬಹುದು

> "ಓದಿದವರಿಗೆಲ್ಲಾ ಸರ್ಕಾರವೇ ಕೆಲಸ ಕೊಡುತ್ತದೆ ಎಂಬ ಕಾನೂನು ಉಂಟಾ? ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಬಹುದಲ್ವಾ! ಎಂಬ ಉತ್ತರಗಳು ಬರಬಹುದು. ಆದರೆ ಸರ್ಕಾರಿ ಕೆಲಸದಲ್ಲಿ ಸಿಗುವ ಸವಲತ್ತುಗಳನ್ನು ಎಲ್ಲಾ ಖಾಸಗಿ ಸಂಸ್ಥೆಗಳು ಕೊಡಲು ಸಾಧ್ಯವೇ? ಯಾವ ಸರ್ಕಾರವೇ ಬರಲಿ ವಿದ್ಯಾರ್ಥಿಗಳ, ಸರ್ಕಾರಿ ಕೆಲಸಗಳನ್ನು ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಅಭ್ಯರ್ಥಿಗಳ ಮನಸ್ಥಿತಿ ಅರಿತುಕೊಂಡು ಹಂತ ಹಂತವಾಗಿಯಾದರೂ ನೇಮಕಾತಿ ಪ್ರಕ್ರಿಯೆಗಳನ್ನು ಚುರುಕಾಗಿ ಮುಗಿಸಬೇಕು.

ಸರ್ಕಾರದ ಧೋರಣೆ: ಚುನಾವಣೆ ಸಮಯ ಬಂದಾಗ ಮಾತ್ರ ಉದ್ಯೋಗ ಭರ್ತಿ ಮಾಡುವೆವು, ನಿರುದ್ಯೋಗ ಸಮಸ್ಯೆಗಳನ್ನು ಕಡಿಮೆ ಮಾಡುವೆವು ಎಂಬಿತ್ಯಾದಿ ಹುಸಿ ಭರವಸೆಗಳನ್ನು ನೀಡುತ್ತಾ ಉದ್ಯೋಗದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳ ಪಾಲಿಗೆ ಅಂಗೈನಲ್ಲಿ ಕೈಲಾಸ ತೋರಿಸುವ ನಾಟಕವಾಡುತ್ತಿದೆ. ಯಾವ ಸರ್ಕಾರಗಳು ಬಂದರೂ ಸರ್ಕಾರಿ ಉದ್ಯೋಗ ಎಂಬುದು ಸದ್ಯಕ್ಕಂತೂ ಗಗನ ಕುಸುಮವಾಗಿದೆ. ಕರ್ನಾಟಕ ಸರ್ಕಾರವನ್ನೇ ತೆಗೆದುಕೊಂಡರೂ ಹೊಸ ಸರ್ಕಾರ ಆಡಳಿತಕ್ಕೆ ಬಂದು ಎರಡು ವರ್ಷಗಳಾದರೂ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಜಾತಿ ಸಮೀಕ್ಷೆ, ರಸ್ತೆ ಕಾಮಗಾರಿ, ಭವನಗಳ ನಿರ್ಮಾಣ ಹೀಗೆ ಉಳಿದ ಕೆಲಸಗಳಲ್ಲೇ ತಲ್ಲೀನವಾಗಿರುವ ಸರ್ಕಾರಕ್ಕೆ ಓದಿ ಸರ್ಕಾರಿ ಉದ್ಯೋಗದ ನಿರೀಕ್ಷೆಯಲ್ಲಿರುವವರ ಮನಸ್ಥಿತಿ ಅರ್ಥವಾಗುತ್ತಿಲ್ಲ. ಇನ್ನೂ ಕೇಂದ್ರ ಸರ್ಕಾರದ ಕಥೆಯು ಇದಕ್ಕಿಂತ ಭಿನ್ನವಾಗಿ ಏನೂ ಇಲ್ಲ. ಸರ್ಕಾರಿ ಕೆಲಸ ಎಂಬುದಂತೂ ಇತ್ತೀಚೆಗೆ ಕೈಗೆ ಸಿಗದ ಮಾಯಾ ಜಿಂಕೆಯೇ ಆಗಿದೆ.

ಶಿಕ್ಷಕರ ನೇಮಕಾತಿ ನಡೆದು ಎರಡು ವರ್ಷಗಳೇ ಆದವು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕರೇ ಇಲ್ಲ ಎಂಬ ವಿಷಯವನ್ನು ಪತ್ರಿಕೆಗಳಲ್ಲಿ ನೋಡಿ ಸರ್ಕಾರದ ನಿಲುವೇನು ಎಂಬುದೇ ಅರ್ಥವಾಗುತ್ತಿಲ್ಲ? ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ಅತಿಥಿ ಉಪನ್ಯಾಸಕ ನೇಮಕಾತಿ ನಡೆಸಿ ಕೈ ತೊಳೆದುಕೊಳ್ಳುತ್ತಿರುವ ಸರ್ಕಾರ ಹಣದ ಉಳಿತಾಯದೊಂದಿಗೆ ಭವಿಷ್ಯದ ಕನಸು ಕಾಣುತ್ತಿರುವ ಅಭ್ಯರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದೆ ಎಂದೆನಿಸುತ್ತಿದೆ.

ಓದಿದವರಿಗೆಲ್ಲಾ ಸರ್ಕಾರವೇ ಕೆಲಸ ಕೊಡುತ್ತದೆ ಎಂಬ ಕಾನೂನು ಉಂಟಾ? ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಬಹುದಲ್ವಾ! ಎಂಬ ಉತ್ತರಗಳು ಬರಬಹುದು. ಆದರೆ ಸರ್ಕಾರಿ ಕೆಲಸದಲ್ಲಿ ಸಿಗುವ ಸವಲತ್ತುಗಳನ್ನು ಎಲ್ಲಾ ಖಾಸಗಿ ಸಂಸ್ಥೆಗಳು ಕೊಡಲು ಸಾಧ್ಯವೇ? ಯಾವ ಸರ್ಕಾರವೇ ಬರಲಿ ವಿದ್ಯಾರ್ಥಿಗಳ, ಸರ್ಕಾರಿ ಕೆಲಸಗಳನ್ನು ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಅಭ್ಯರ್ಥಿಗಳ ಮನಸ್ಥಿತಿಯನ್ನು ಅರಿತುಕೊಂಡು ಹಂತ–ಹಂತವಾಗಿಯಾದರೂ ನೇಮಕಾತಿ ಪ್ರಕ್ರಿಯೆಗಳನ್ನು ಚುರುಕಾಗಿ ಮುಗಿಸಬೇಕು.

ಮೇಲರಿಮೆ: ನಿರುದ್ಯೋಗ ಹೆಚ್ಚಾಗಲು ಮತ್ತೊಂದು ಕಾರಣ ನಮ್ಮ ಜನರಲ್ಲಿ ಇರುವ ಮೇಲರಿಮೆ ಆಂಗ್ಲಭಾಷೆಯಲ್ಲಿ ಸುಪ್ರಿಯಾಲಿರ್ಟಿ ಕಾಂಪ್ಲೆಕ್ಸ್ ಎಂದು ಕರೆಯಬಹುದು ಎನಿಸುತ್ತದೆ. ನಾನು ಅಷ್ಟು ಓದಿ ಇಷ್ಟು ಕಡಿಮೆ ಸಂಬಳದ ಕೆಲಸ ಮಾಡಬೇಕಾ? ಹೋಗಿ ಹೋಗಿ ನಾನು ಆ ಕೆಲಸ ಮಾಡುವುದಾ ಸಾಧ್ಯವೇ ಇಲ್ಲ! ಹೀಗೆ ಯುವ ಜನಾಂಗದವರಲ್ಲಿ ಮೂಡಿಸಿಕೊಳ್ಳುತ್ತಿರುವ ಮೇಲರಿಮೆಯ ಕಾರಣ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿದೆ. ಇದರರ್ಥ ಯಾವೊಂದು ಕೆಲಸವನ್ನು ನೀವು ಮಾಡಲೇ ಬೇಕೆಂಬ ಒತ್ತಡವಲ್ಲ. ಸಿಗುವ / ಸಿಕ್ಕಿರುವ ಕೆಲಸವನ್ನು ಕಿರಿದೆನ್ನದೆ ಮಾಡಿ ಎಂದು ಹೇಳುವ ಒಂದು ಸಣ್ಣ ಮನವಿ ಅಷ್ಟೇ. ಈ ಮಾತನ್ನು ಹೇಳುವಾಗ ಡಿ.ವಿ.ಜಿ ಅವರು ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ ಪದ್ಯವೊಂದು ನೆನಪಿಗೆ ಬರುತ್ತದೆ

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು?
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ??
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ?
ಹೊರಡು ಕರೆ ಬರಲ್ ಅಳದೆ? ಮಂಕುತಿಮ್ಮ??


ನಮ್ಮ ಸುತ್ತಲಿನ ಪರಿಸರ: ಒಂದು ವೇಳೆ ನಮ್ಮ ಓದಿಗೂ ನಾವು ಮಾಡುತ್ತಿರುವ ಕೆಲಸಕ್ಕೂ ಸಂಬಂಧವಿಲ್ಲದಂತೆ ಕೆಲಸ ಮಾಡುತ್ತಿರುತ್ತೇವೆ. ಆದರೆ ನಮ್ಮ ಸುತ್ತಲೂ ಇರುವ ಜನರು (ಅದು ಸಂಬಂಧಿಕರೇ ಆಗಿರಬಹುದು ಅಥವಾ ಮನೆಯವರೇ ಆಗಿರಬಹುದು ಅಥವಾ ಸ್ನೇಹಿತರೇ ಆಗಿರಬಹುದು) ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಲಾಗದೆ ಅವರಾಡುವ ಚುಚ್ಚು ನುಡಿಗಳನ್ನು ಸಹಿಸಲಾರದೆ ಆತ್ಮವಿಶ್ವಾಸವನ್ನು ಕಳೆದುಕೊಂಡು ಇರುವ ಕೆಲಸವನ್ನು ಬಿಟ್ಟು ಹೋಗುವ ಜನರನ್ನೂ ಗಮನಿಸಬಹುದು.

ನಮ್ಮ ಮನೋಭಾವ: ಜನ ನೂರು ಮಾತನ್ನಾಡಲಿ ಮೊದಲು ನಾವು ಬದಲಾಗಬೇಕು. ನಾನು ಓದಿದ್ದೇನೆ ನನಗೆ ಸರ್ಕಾರಿ ನೌಕರಿ ಮಾತ್ರ ಬೇಕು ಹೇಗೆ? ಯಾವ ಸರ್ಕಾರ ನಿಯಮ ಮಾಡಿದೆ ಓದಿದವರಿಗೆಲ್ಲಾ ಸರ್ಕಾರ ಕೆಲಸ ಕೊಡುತ್ತದೆ ಎಂದು? ಆದ್ದರಿಂದ ನಾವು ನಮ್ಮ ಮನೋಭಾವನೆಯನ್ನು ಬದಲಿಸಿಕೊಳ್ಳಬೇಕು.ಶಿಕ್ಷಣ ನಮ್ಮ ಜ್ಞಾನಕ್ಕಾಗಿಯೇ ವಿನಹ ಕೆಲಸಕ್ಕಾಗಿ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಇದನ್ನು ತಿಳಿದರೆ ಅರ್ಧ ಸಮಸ್ಯೆ ಪರಿಹಾರವಾದಂತೆ.

ಕುಟುಂಬ: ಕುಟುಂಬದಲ್ಲಿ ಇರುವವರು ಕೂಡ ನಿರುದ್ಯೋಗ ಉಂಟಾಗಲು ಪರೋಕ್ಷವಾಗಿ ಕಾರಣವಾಗ್ತಾರೆ. ಅಷ್ಟು ಓದಿ ಈ ಕೆಲಸಕ್ಕೆ ಹೋಗೋದಾ ? ಇಷ್ಟು ಕಡಿಮೆ ಸಂಬಳಕ್ಕೆ ಆ ಕೆಲಸಕ್ಕೆ ಹೋಗೋದಕ್ಕಿಂತ ಮನೆಯಲ್ಲಿಯೇ ಇರು ಎಂದು ಒತ್ತಡ ಹೇರುವುದರಿಂದ ನಿರುದ್ಯೋಗ ಉಂಟಾಗುತ್ತದೆ

ಈ ಬಗೆಯ ಸಂಗತಿಗಳೊಂದಿಗೆ ಅತಿಯಾದ ನಿರೀಕ್ಷೆ, ಮಾನಸಿಕ ತೊಳಲಾಟಗಳು, ಸಾಮಾಜಿಕ ಸ್ಥಾನಮಾನ... ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯನ್ನೇ ಮಾಡಬಹುದೇನೋ? ಆದರೆ ಒಂದಂಶವನ್ನು ನಾವೆಲ್ಲ ಅರ್ಥ ಮಾಡಿಕೊಳ್ಳಬೇಕು. ಇಂದು ನಾವು ಇಷ್ಟ ಪಟ್ಟ ಕೆಲಸ ಸಿಗದಿರಬಹುದು ಅದಕ್ಕೆ ಶಿಫಾರಸ್ಸು, ಜಾತಿ, ಧರ್ಮ ಹೀಗೆ ಏನೇ ಕಾರಣವಿರಬಹುದು ಆದರೆ ನಾವು ನಮ್ಮ ಹಠವನ್ನು ಬಿಡಬಾರದು. ಕೆಲಸ ಪಡೆದೆ ತೀರುವೆನೆಂಬ ಛಲ ಬಿಡದೆ ಸತತ ಪ್ರಯತ್ನದಿಂದ ಏನು ಬೇಕಾದರೂ ಸಾಧಿಸಬಹುದು. ಆದ್ದರಿಂದ ನಿರುದ್ಯೋಗ ಎಂಬುದನ್ನು ಶಾಪ ಎಂದು ಪರಿಗಣಿಸದೆ, ನಿರುದ್ಯೋಗವನ್ನು ಭೂತ ಎಂದು ಶಪಿಸದೆ ಸತತ ಪ್ರಯತ್ನದಿಂದ ನಿರುದ್ಯೋಗವನ್ನು ಇಲ್ಲವಾಗಿಸೋಣ, ನಿರುದ್ಯೋಗಕ್ಕೆ ಬೇರೆಯವರ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ನಿರುದ್ಯೋಗವನ್ನು ಹೋಗಲಾಡಿಸೋಣ.

ಸಿಎಂ ಸಿದ್ದರಾಮಯ್ಯ ಹುಟ್ಟುಹಬ್ಬದ ಪ್ರಯುಕ್ತ ಇಂದು ಸಹಪಂಕ್ತಿ ಭೋಜನ



ಮೈಸೂರು, ಆ.11(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಪ್ರಯುಕ್ತ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ಆ.12ರಂದು ಮಧ್ಯಾಹ್ನ 12ಕ್ಕೆ ಮೈಸೂರಿನ ಬುದ್ಧ ವಿಹಾರದಲ್ಲಿ ಪೌರ ಸೇನಾನಿಗಳೊಂದಿಗೆ ಸಾಮೂಹಿಕವಾಗಿ ಸ್ಥಳದಲ್ಲೇ ಅಡುಗೆ ತಯಾರಿಸಿ ಸಹಪಂಕ್ತಿ ಭೋಜನ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೌರಕಾರ್ಮಿಕರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಸಾಹಿತಿಗಳು ಚಿಂತಕರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಮಾಜದಲ್ಲಿ ಇಂದಿಗೂ ಅಸ್ಪೃಶ್ಯತೆ, ಅಸಮಾನತೆ ಬೇರೂರಿದ್ದು ಅದರ ನಿವಾರಣೆಯಲ್ಲಿ ಸಹಪಂಕ್ತಿ ಭೋಜನ ಪರಿಣಾಮ ಬೀರಲಿದೆ ಎಂದರು.

ಕಾರ್ಯಕ್ರಮದಲ್ಲಿ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ, ಲೇಖಕರಾದ ಪ್ರೊ.ಅರವಿಂದ ಮಾಲಗತ್ತಿ, ಪ್ರೊ.ಸಬಿಹಾ ಭೂಮಿಗೌಡ, ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಕೆ.ಎಸ್.ಭಗವಾನ್, ಜನಾರ್ಧನ್ (ಜನ್ನಿ), ಡಾ.ಬಿ.ಜೆ.ವಿಜಯ ಕುಮಾರ್, ಆರ್.ಮೂರ್ತಿ, ಎಂ.ಲಕ್ಷ್ಮಣ್ ಹಾಗೂ ಇತರ ಮುಖಂಡರು ಧರ್ಮತೀತವಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.



ಮಹಿಷಾಸುರನಿಗೆ ಪುಷ್ಪಾರ್ಚನೆ

ಹುಣ್ಣಿಮೆ ದಿವಸ ಮಹಿಷಾಸುರನಿಗೆ ಪುಷ್ಪಾರ್ಚನೆ ಮಾಡಲಾಯಿತು. ಮೇಣದ ಬತಿ ಹಚ್ಚಿ ಬುದ್ಧರ ಪಂಚಶೀಲ ಬೋಧಿಸಲಾಯಿತು. ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್, ಸಾಹಿತಿ ಮತ್ತು ಲೇಖಕರಾದ ಸಿದ್ದಸ್ವಾಮಿ, ಪತ್ರಿಕಾ ವಿತರಕ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಶಿವಣ್ಣ, ರಾಜೇಶ್ ಇದ್ದರು.

ತುಂತುರು ಮಳೆಯಲ್ಲಿ ದಸರಾ ಗಜಪಡೆ ಗಾಂಭೀರ್ಯ ನಡೆ

ಮೈಸೂರು,ಆ.11(ಎಂಟಿವೈ)– ಸೋಮವಾರ ಬೆಳಗ್ಗೆ ತುಂತುರು ಮಳೆಯ ನಡುವೆ ಅರಮನೆಯಿಂದ ಹೊರಗೆ ಬಂದ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಜನ ಮುಗಿಬಿದ್ದರು. ಗಜಪಯಣದ ಮೂಲಕ ಆ.4ರಂದು ಮೊದಲ ತಂಡದ 9 ಆನೆಗಳು ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಬಂದು ಬೀಡು ಬಿಟ್ಟಿದ್ದವು. ಆ.10ರಂದು ಸಂಜೆ ಅರಮನೆ ಆವರಣ ಪ್ರವೇಶಿಸಿದ್ದ ಗಜಪಡೆಗೆ ಇಂದು ಬೆಳಗ್ಗೆ ತೂಕದ ಪರೀಕ್ಷೆ ಮಾಡಿಸಲಾಯಿತು.

ಅರಮನೆ ಆವರಣದಿಂದ ಬೆಳಗ್ಗೆ 7.30ಕ್ಕೆ ಬಲರಾಮ ದ್ವಾರದಿಂದ ಹೊರಗೆ ಬಂದ ಗಜಪಡೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಮೂಲಕ ಧನ್ವಂತರಿ ರಸ್ತೆಯಲ್ಲಿ ಸಾಗಿದವು. ತೂಕದ ಪರೀಕ್ಷೆ ನಂತರ ಧನ್ವಂತರಿ ರಸ್ತೆಯಿಂದ ಸಯ್ಯಾಜಿರಾವ್ ರಸ್ತೆಯ ಏಕಮುಖ ಸಂಚಾರದ ಪಥದಲ್ಲಿ ಕೆ.ಆರ್.ವೃತ್ತಕ್ಕೆ ಬಂದ ಗಜಪಡೆ ನಂತರ ಅರಮನೆಯಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಅರಮನೆಗೆ ಪ್ರವೇಶಿಸಿದವು.

ಮೊದಲ ದಿನವೇ ಭಕ್ತಿ: ಬೆಳಗ್ಗಿನಿಂದ ಸುರಿಯುತ್ತಿದ್ದ ತುಂತುರು ಮಳೆಯಲ್ಲಿಯೇ ದಸರಾ ಗಜಪಡೆಯನ್ನು ಅರಮನೆಯಿಂದ ಹೊರಗೆ ಕರೆತರಲಾಯಿತು. ಕೊಡೆ ಹಿಡಿದುಕೊಂಡು ಎಲ್ಲಾ ಮಾವುತರು ತಮ್ಮ ಆನೆಗಳನ್ನು ಮುನ್ನಡೆಸಿಕೊಂಡು ಬಂದರು. ಕೆ.ಆರ್.ವೃತ್ತ ದಾಟಿ ಸಯ್ಯಾಜಿರಾವ್ ರಸ್ತೆ ಬರುತ್ತಿದ್ದಂತೆಯೇ ರಸ್ತೆ ಬದಿ ವ್ಯಾಪಾರಿಗಳು ಎಂದಿನಂತೆ ಗಜಪಡೆಯನ್ನು ಪ್ರೀತಿಯಿಂದ ಎದುರುಗೊಂಡು ಎಲ್ಲಾ ಆನೆಗಳಿಗೂ ಹೂವು, ಹಣ್ಣು ನೀಡಿ ಗೌರವ ಸಮರ್ಪಿಸಿದರು. ಈ ಸಾಲಿನ ದಸರಾ ಗಜಪಡೆಯನ್ನು ಮೊದಲ ಬಾರಿಗೆ ರಾಜ ಮಾರ್ಗದಲ್ಲಿ ಕಂಡ ಜನ ಕೈ ಮುಗಿದು ಸ್ವಾಗತಿಸಿದರು.



ಮೈಸೂರಿನ ಕೆ.ಆರ್. ವೃತ್ತದಲ್ಲಿ ಸೋಮವಾರ ದಸರಾ ಗಜಪಡೆ ಮಳೆ ನಡುವೆಯೂ ಗಾಂಭೀರ್ಯವಾಗಿ ಸಾಗುತ್ತಿರುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಇಂದು ಸಿಎಂ ಸಿದ್ದರಾಮಯ್ಯರ ಹುಟ್ಟುಹಬ್ಬ ಆಚರಣೆ



ಮೈಸೂರು, ಆ.11– ಮೈಸೂರು ನಗರ ಹಾಗೂ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ಘಟಕ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ(ಆ.12) ಬೆಳಗ್ಗೆ 10 ಗಂಟೆಗೆ ಸಾಮಾಜಿಕ ಸೇವಾಕಾರ್ಯಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ 78ನೇ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಘಟಕದ ನಗರ ಅಧ್ಯಕ್ಷ ಎನ್.ಆರ್.ನಾಗೇಶ್ ಹಾಗೂ ಗ್ರಾಮಾಂತರ ಅಧ್ಯಕ್ಷ ಎನ್.ಸೋಮು ತಿಳಿಸಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಸೂರಜ್ ಹೆಗಡೆ ಸೇರಿದಂತೆ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಪಕ್ಷದ ಬಂಧುಗಳು ಹಾಗೂ ಸಿಎಂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಶ್ರೀಮತಿ ಇಂದಿರ.ಎಂ. ಕೋಂ ಹೆಚ್.ಕೆ. ಮಲ್ಲೇಶ್ ರವರು ಖರೀದಿಸಲು ಇಚ್ಛಿಸಿದ್ದು, ಇದಕ್ಕೆ ಯಾರಿಂದಲಾದರೂ ತಂಟೆ ತಕರಾರು ಇದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ 7 ದಿನಗಳ ಒಳಗಾಗಿ ಸಲ್ಲಿಸಬಹುದಿದ್ದು, ತದನಂತರದ ವ್ಯವಹರಣೆಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಗಾಯಿತ್ರಿಪುರಂ, 1ನೇ ಹಂತ, 1ನೇ ಫೇಸ್‌ನಲ್ಲಿರುವ ಮನೆ ನಂ. 20 ರ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ರಸ್ತೆ,
ಪಶ್ಚಿಮಕ್ಕೆ: 41ನೇ ನಂಬರ್ ಸ್ವತ್ತು.
ಉತ್ತರಕ್ಕೆ: 21ನೇ ನಂಬರ್ ಸ್ವತ್ತು,
ದಕ್ಷಿಣಕ್ಕೆ: 19ನೇ ನಂಬರ್ ಸ್ವತ್ತು,

ಈ ಮಧ್ಯೆ ಇರುವ ಪೂರ್ವ ಪಶ್ಚಿಮ 33 ಅಡಿ, ದಕ್ಷಿಣೋತ್ತರ 20 ಅಡಿ ಅಳತೆಯುಳ್ಳ ಸ್ವತ್ತಿನಲ್ಲಿ ಕಟ್ಟಿರುವ ವಾಸದ ಮನೆ.

ಸಹಿ/– ಮಂಜು.ಎಸ್., ಬಿ.ಎ.ಎಲ್.,
ಎಲ್.ಎಲ್.ಬಿ., ವಕೀಲರು
KAR 238/2000
ಕಛೇರಿ: ನಂ. 178, 'ಸಿಟಿ ಪ್ಲಾಜಾ',
ಎಂ.ಜಿ. ರಸ್ತೆ, ಉದಯಗಿರಿ, ಮೈಸೂರು–19
Mob: 9845025908
Date: 8-8-2025

IN THE COURT OF THE 2nd ADDITIONAL DISTRICT & SESSION JUDGE AT MYSORE
O.S. No. 02/2024

Plaintiff : Canara Bank, Metagalli Branch, Mysore Represented by its Senior Manager

Vs

Defendant : M/s. Swathi Industries Represented by its Proprietor Sri Prasanna S/o Late Somegowda, Plot No. 238, Hebbal Industrial Area, Hebbal, Mysore - 570018

SUMMONS TO DEFENDANT UNDER ORDER V RULE 20 OF C.P.C. BY NEWS PAPER PUBLICATION

WHEREAS, the Plaintiff Canara Bank, Metagalli Branch, Mysore has instituted the above Suit against you as Defendant for recovery of a Sum of **Rs. 9,35,721/-** with interest and Costs. You are hereby Summoned to appear either in person or by a Pleader duly instructed by you on **01-09-2025 at 11.00 A.M.,** before the Hon'ble court of anser the said claim, in default the above suit will be determined ex-parte.

Given under my hand and seal this Court dated this 04-08-2025 at Mysore

By order of Court
Sd/- Chief Administrative officer
District and Sessions Court
Mysore

Advocate for Plaintiff
D.B. Praveen B.A.L.L.B.
Advocate, KAR 2085/2007
#178/1, 1st Floor, 11th Main
5th Cross, Near Javaregowda Park, Saraswathipuram, Mysore
Place : Mysore Date : 04-08-2025


ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು









ಆ.15ರಂದು ಸ್ವಾತಂತ್ರ್ಯ ದಿನಾಚರಣೆ



ಮೈಸೂರು,ಆ.11– ಆಗಸ್ಟ್ 15ರಂದು ಆಚರಿಸಲ್ಪಡುವ ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಬೆಳಗ್ಗೆ 9 ಗಂಟೆಗೆ ಪಂಜಿನ ಕವಾಯತು ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನೆರವೇರಿಸುವ ಕಾರ್ಯಕ್ರಮ. ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅಂದು ಸಂಜೆ 6 ಗಂಟೆಗೆ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯದೆ.

ಪ್ಲಾಸ್ಟಿಕ್ ಧ್ವಜದ ಬಳಕೆ ನಿಷೇಧ: ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ಲಾಸ್ಟಿಕ್ ಮತ್ತು ಕಾಗದದ ರಾಷ್ಟ್ರಧ್ವಜವನ್ನು ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಳಸುತ್ತಿದ್ದು, (ಪ್ರದರ್ಶನ ಮತ್ತು ಹಾರಾಟ) ಸೂಕ್ತ ರೀತಿಯಲ್ಲಿ ಬಳಸದೇ ಇರುವುದರಿಂದ ರಾಷ್ಟ್ರಧ್ವಜಕ್ಕೆ ಅಗೌರವ, ಅಪಮಾನವಾಗುವುದರಿಂದ ಅದನ್ನು ತಪ್ಪಿಸುವ ಉದ್ದೇಶದಿಂದ ಪ್ಲಾಸ್ಟಿಕ್, ಕಾಗದದ ರಾಷ್ಟ್ರಧ್ವಜವನ್ನು ಬಳಸದಿರಲು, ಎಲ್ಲರೂ ಬಟ್ಟೆಯ ಧ್ವಜ ಬಳಸಲು, ವ್ಯಾಪಾರಸ್ಥರು ಸಹ ಪ್ಲಾಸ್ಟಿಕ್ ಮತ್ತು ಕಾಗದದ ರಾಷ್ಟ್ರಧ್ವಜ ಮಾರಾಟ ಮಾಡದಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಶಿವರಾಜ್ ತಿಳಿಸಿದ್ದಾರೆ.

ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸುವಿಕೆ ಕಡ್ಡಾಯ

ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮೈಸೂರು ನಗರದ ಎಲ್ಲಾ ಜಿಲ್ಲಾ ಮಟ್ಟದ ಸರ್ಕಾರಿ ಕಚೇರಿ ಅಧಿಕಾರಿಗಳು, ಸಿಬ್ಬಂದಿ (ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ) ಭಾಗವಹಿಸಬೇಕು.

ಅಂದು ಬೆಳಗ್ಗೆ 8 ಗಂಟೆಯೊಳಗೆ ತಮ್ಮ ಕಚೇರಿ, ಶಾಲಾ–ಕಾಲೇಜುಗಳಲ್ಲಿ ಧ್ವಜಾರೋಹಣ ನಡೆಸಿ, ನಂತರ ಮುಖ್ಯ ಸಮಾರಂಭದಲ್ಲಿ ತಪ್ಪದೆ ಭಾಗವಹಿಸಬೇಕು, ಸಮಾರಂಭ ನಡೆಯುವ ಸ್ಥಳದ ಪ್ರವೇಶ ದ್ವಾರದಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಹಬ್ಬಗಳ ಸಮಿತಿಯ ಅಧ್ಯಕ್ಷರ ತಾತ್ಕಾಲಿಕ ಕಛೇರಿಯನ್ನು ತೆರೆಯಲಾಗುತ್ತಿದ್ದು, ಅಧಿಕಾರಿಗಳು, ನೌಕರರು ಕಾರ್ಯಕ್ರಮಕ್ಕೆ ಹಾಜರಾದ ಬಗ್ಗೆ ಅಲ್ಲಿ ಇರಿಸಲಾಗಿರುವ ಹಾಜರಾತಿ ವಹಿಯಲ್ಲಿ ಸಹಿ ಮಾಡಬೇಕು.

ಪ್ರತಿಯೊಂದು ಜಿಲ್ಲಾ ಮಟ್ಟದ ಅಧಿಕಾರಿಯು ತಮ್ಮ ಅಧೀನ ಸಿಬ್ಬಂದಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಲು ಸೂಚನೆ, ಕಚೇರಿ ಆದೇಶ ಹೊರಡಿಸತಕ್ಕದ್ದು ಮತ್ತು ಅವರ ಹಾಜರಿಯನ್ನು ಗಮನಿಸುವುದು.

ಕಾರ್ಯಕ್ರಮದಲ್ಲಿ ಹಾಜರಾದ ಸಿಬ್ಬಂದಿಯ ಸಹಿಯೊಂದಿಗೆ ಹಾಜರಾತಿ ಪಟ್ಟಿಯನ್ನು ಕಾರ್ಯಕ್ರಮ ಮುಗಿದ ಬಳಿಕ ಅಧ್ಯಕ್ಷರ ತಾತ್ಕಾಲಿಕ ಕಚೇರಿಗೆ ತಲುಪಿಸಬೇಕು. ಗೈರು ಹಾಜರಾಗುವ ಸಿಬ್ಬಂದಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಲ್ವಡಿ ಅವರಷ್ಟೇ ಸಿದ್ದರಾಮಯ್ಯ ಕೂಡ ಮೈಸೂರಿಗೆ ಹಲವು ಕೊಡುಗೆ ನೀಡಿದ್ದಾರೆ

ಡಾ.ಯತೀಂದ್ರ ಹೇಳಿಕೆಗೆ ಶಾಸಕ ಕೆ.ಹರೀಶ್‌ಗೌಡ ಸಮರ್ಥನೆ

ಮೈಸೂರು, ಆ.11(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಷ್ಟೇ ಮೈಸೂರಿಗೆ ಕೊಡುಗೆ ನೀಡಿದ್ದಾರೆಂಬ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರ ಹೇಳಿಕೆ ಸತ್ಯವಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಸಮರ್ಥನೆ ಮಾಡಿಕೊಂಡಿದ್ದಾರೆ.

ಮೈಸೂರಿನ ಚಿಕ್ಕ ಗಡಿಯಾರದಲ್ಲಿ ಇಂದು ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಿದ್ದ 'ದಿ ಮಾಸ್ ಲೀಡರ್ ಸಿದ್ದರಾಮಯ್ಯ@78' ವಿಚಾರ ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾವಿರಾರು ವರ್ಷ ಕಳೆದರೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆ ಮರೆಯಲು ಸಾಧ್ಯವಿಲ್ಲ ಎಂದರು.

ಆದರೆ ನಾಲ್ವಡಿ ಅವರಷ್ಟೇ ಸಿದ್ದರಾಮಯ್ಯ ಕೂಡ ಮೈಸೂರನ್ನು ಅಭಿವೃದ್ಧಿ ಮಾಡಿದ್ದಾರೆ. ಆದರೆ ಬಿಜೆಪಿಯವರು ಮಾತಿನ ತೆವಲಿಗೆ ಸಿದ್ದರಾಮಯ್ಯ ಅವರ ಆಡಳಿತವನ್ನು ಟೀಕಿಸುತ್ತಾರೆ ಎಂದು ಆರೋಪಿಸಿದರು. ಮೈಸೂರಿನಲ್ಲಿ ವರುಣ ನಾಲೆ ನಿರ್ಮಿಸಿ ಸಾವಿರಾರು ಎಕರೆಯನ್ನು ನೀರಾವರಿ ಪ್ರದೇಶವಾಗಿ ಮಾಡಿದ್ದಾರೆ. ಕಿದ್ವಾಯಿ ಆಸ್ಪತ್ರೆ, ನೆಫ್ರೋಲಾಜಿ ಸೆಂಟರ್, ಜಯದೇವ ಆಸ್ಪತ್ರೆ ಸೇರಿದಂತೆ ಹಲವು ಆಸ್ಪತ್ರೆಗಳನ್ನು ನಿರ್ಮಿಸಿದ್ದಾರೆ.



> “ಮೈಸೂರಿನ ಪ್ರಮುಖ ರಸ್ತೆಗಳನ್ನು 400 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಗಳಾಗಿ ನಿರ್ಮಿಸಲಾಗುತ್ತಿದೆ. ಕಾಂಕ್ರೀಟ್ ರಸ್ತೆ ನಿರ್ಮಿಸಲು ಈಗಾಗಲೇ ಟೆಂಡರ್ ಆಗಿದ್ದು, ವರ್ಕ್ ಆರ್ಡರ್ ಕೂಡ ನೀಡಲಾಗಿದೆ.
> –ಕೆ.ಹರೀಶ್‌ಗೌಡ, ಶಾಸಕ.

ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ 15 ಸಾವಿರ ವಿದ್ಯಾರ್ಥಿನಿಯರಿದ್ದು, ವರ್ಷಗಳು ಕಳೆದಂತೆ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿ ನೂತನ ಮಹಾರಾಣಿ ಕಾಲೇಜು ನಿರ್ಮಿಸಿದ್ದಾರೆ ಎಂದು ಹರೀಶ್‌ಗೌಡ ವಿವರಣೆ ನೀಡಿದರು.

ಮಹಾರಾಣಿ ಕಾಲೇಜಿನ ಹಾಸ್ಟೆಲ್‌ನಲ್ಲಿ ಕೇವಲ 350 ವಿದ್ಯಾರ್ಥಿನಿಯರ ವಾಸ್ತವ್ಯಕ್ಕೆ ಅವಕಾಶ ಇತ್ತು. ಈ ವಿಚಾರವನ್ನು ನಾನು ಸಿದ್ದರಾಮಯ್ಯ ಅವರ ಗಮನಕ್ಕೆ ತಂದಾಗ 120 ಕೋಟಿ ವೆಚ್ಚದಲ್ಲಿ 3,800 ವಿದ್ಯಾರ್ಥಿನಿಯರ ವಾಸ್ತವ್ಯಕ್ಕೆ ಹಾಸ್ಟೆಲ್ ನಿರ್ಮಿಸಿದರು. ಇಂತಹ ಹಲವು ಅಭಿವೃದ್ಧಿ ಮಾಡಿರುವ ಸಿದ್ದರಾಮಯ್ಯ ಅವರು ನಾಲ್ವಡಿ ಅವರಷ್ಟೇ ಮೈಸೂರಿಗೆ ಕೊಡುಗೆ ನೀಡಿದ್ದಾರೆ ಎಂದು ಪುನರುಚ್ಚರಿಸಿದರು. ಇಷ್ಟೆಲ್ಲಾ ಅಭಿವೃದ್ಧಿ ಮಾಡಿದರೂ ಮುಡಾ ವಿಚಾರದಲ್ಲಿ ಬಿಜೆಪಿ ನಾಯಕರು ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿ ಅವರ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮಾಡಿದರು. ಆದರೆ ಸುಪ್ರೀಂಕೋರ್ಟ್ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ನೀಡಿದ್ದು, ಆರೋಪ ಮುಕ್ತರಾಗಿದ್ದಾರೆ ಎಂದು ಶಾಸಕ ಹರೀಶ್‌ಗೌಡ ತಿಳಿಸಿದರು.

ಇದೇ ವೇಳೆ ಶಾಸಕ ಹರೀಶ್‌ಗೌಡ ಅವರು ಲಿಂಗತ್ವ ಅಲ್ಪಸಂಖ್ಯಾತರಿಗೆ ಎರಡನೇ ಹಂತದಲ್ಲಿ ವಿಮೆ ಬಾಂಡ್ ವಿತರಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಬಿ.ಟಿ.ಲಲಿತಾ ನಾಯಕ್, ಕೋಟೆ ಎಂ.ಶಿವಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡರಾದ ಕೆ.ಎಸ್.ಶಿವರಾಮು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಚಿವ ಸ್ಥಾನದಿಂದ ರಾಜಣ್ಣ ವಜಾ ಖಂಡಿಸಿ ನಾಯಕ ಮುಖಂಡರ ಪ್ರತಿಭಟನೆ



ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿರುವುದನ್ನು ಖಂಡಿಸಿ ನಾಯಕ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರು, ಆ.11(ಎಸ್‌ಪಿಎನ್)– ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿರುವ ಹೈಕಮಾಂಡ್ ನಿರ್ಧಾರವನ್ನು ವಿರೋಧಿಸಿ ಕರ್ನಾಟಕ ರಾಜ್ಯ ನಾಯಕ ಸಮುದಾಯ ಹಿತರಕ್ಷಣಾ ವೇದಿಕೆ ಸದಸ್ಯರು ಮೈಸೂರು ಜಿಲ್ಲಾ ನ್ಯಾಯಾಲಯದ ಎದುರಿನ ಮಹಾತ್ಮ ಗಾಂಧೀಜಿ ಪುತ್ಥಳಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದರು.

ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ವಿವಿಧ ಘೋಷಣೆ ಕೂಗಿದರು. ಬಳಿಕ ಮಾತನಾಡಿದ ಅವರು, ಈ ಹಿಂದೆ ನಾಗೇಂದ್ರ ಅವರನ್ನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿಸಲಾಯಿತು. ಇದೀಗ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದಲೇ ವಜಾಗೊಳಿಸಲಾಗಿದೆ. ಈ ನಡೆ ನಾಯಕ ಸಮುದಾಯಕ್ಕೆ ಮಾಡಿದ ಅಪಮಾನವಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 136 ಸ್ಥಾನಗಳಿಸಲು ನಾಯಕ ಸಮುದಾಯದ ಕೊಡುಗೆಯಿದೆ. 15 ಮಂದಿ ನಾಯಕ ಸಮುದಾಯದ ಮುಖಂಡರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಪ್ರತಿ ಬಾರೀ ಯಾವುದೇ ಸಮಸ್ಯೆ ಬಂದರೂ ನಮ್ಮ ಸಮುದಾಯದ ಮುಖಂಡರೇ ಟಾರ್ಗೆಟ್ ಆಗುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಕೂಡಲೇ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಇದರ ನೇರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಸದಸ್ಯರಾದ ಶ್ರೀನಿವಾಸನಾಯಕ, ಪ್ರಭಾಕರ್, ಸುರೇಶ್, ರಾಜು, ಮಣಿ, ಚೌಡಪ್ಪ ಶಿವಣ್ಣ, ವೆಂಕಟೇಶ್ ನಾಯಕ, ಮಾದೇಶ್, ರಮೇಶ್ ಇದ್ದರು.

ಒಳಮೀಸಲಾತಿ ತೀರ್ಮಾನದ ನಂತರ ವೈದ್ಯಕೀಯ ಕಾಲೇಜು ಖಾಲಿ ಹುದ್ದೆ ಭರ್ತಿ



ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್‌ರಿಂದ ಸಿ.ಎನ್.ಮಂಜೇಗೌಡರಿಗೆ ಮಾಹಿತಿ

ಬೆಂಗಳೂರು,ಆ.11 (ಕೆಎಂಶಿ)–ಒಳ ಮೀಸಲಾತಿ ಸಂಬಂಧ ಸರ್ಕಾರ ಸ್ಪಷ್ಟ ತೀರ್ಮಾನ ತೆಗೆದುಕೊಂಡ ನಂತರ ವೈದ್ಯಕೀಯ ಕಾಲೇಜುಗಳ ಖಾಲಿ ಹುದ್ದೆಗಳ ಭರ್ತಿ ಮಾಡಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ವಿಧಾನ ಪರಿಷತ್‌ಗೆ ಇಂದು ಆಶ್ವಾಸನೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸಿಎನ್.ಮಂಜೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದ ಸಮಿತಿ ಒಳಮೀಸಲಾತಿ ಸಂಬಂಧ ಸಲ್ಲಿಸಿರುವ ವರದಿಯನ್ನು ವಿಶೇಷ ಸಂಪುಟ ಸಭೆಯಲ್ಲಿ ಚರ್ಚಿಸಿ, ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ ಎಂದರು.

ಒಳ ಮೀಸಲಾತಿ ಕುರಿತ ಸರ್ಕಾರದ ಅಂತಿಮ ನಿರ್ಧಾರದವರೆಗೆ ಯಾವುದೇ ಇಲಾಖೆಯಲ್ಲಿ ಹುದ್ದೆ ಭರ್ತಿ ಮಾಡಿಕೊಳ್ಳದಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು 12,447 ಹುದ್ದೆಗಳು ಖಾಲಿ ಇವೆಯಾದರೂ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಸಮಸ್ಯೆಯಾಗಿಲ್ಲ. ಸರ್ಕಾರ ಎಲ್ಲಾ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದೆ. ಅಗತ್ಯವಿರುವೆಡೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ನೇಮಕಾತಿಗೆ ವೈದ್ಯಕೀಯ ಕಾಲೇಜುಗಳ ನಿರ್ದೇಶಕರು ಮತ್ತು ಸಂಬಂಧಪಟ್ಟ ಆಸ್ಪತ್ರೆ ಮುಖ್ಯಸ್ಥರಿಗೂ ನಿರ್ದೇಶನ ನೀಡಲಾಗಿದೆ. ಯಾದಗಿರಿ, ರಾಯಚೂರು, ಕಲಬುರಗಿ ಸೇರಿದಂತೆ ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಸಿಬ್ಬಂದಿ ಕೊರತೆ ಇತ್ತು ಅವುಗಳನ್ನು ಭರ್ತಿ ಮಾಡಲಾಗಿದೆ. ಯಾವುದೇ ಕಾಲೇಜು ಅಥವಾ ಆಸ್ಪತ್ರೆಗಳಲ್ಲಿ ಸಮಸ್ಯೆ ಎದುರಾಗಿಲ್ಲ, ಸಮಸ್ಯೆ ಗಮನಕ್ಕೆ ತಂದರೆ ತಕ್ಷಣ ಪರಿಹರಿಸಲಾಗುವುದು ಎಂಬ ಆಶ್ವಾಸನೆ ನೀಡಿದರು.

ಅದ್ದೂರಿ ಕೆಂಪೇಗೌಡರ ಜಯಂತಿ



ಮೈಸೂರಿನ ವಿವೇಕಾನಂದನಗರ ವೃತ್ತದಲ್ಲಿ ಕೆಂಪೇಗೌಡರ ಜಯಂತಿ ನಡೆಯಿತು.

ಮೈಸೂರು, ಆ.11–ಮೈಸೂರಿನ ವಿವೇಕಾನಂದನಗರ ವೃತ್ತದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತಿಯ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಯೋಜಿಸಲಾಗಿತ್ತು.

ಮೈಸೂರಿನ ಕುವೆಂಪುನಗರ ಕಾಂಪ್ಲೆಕ್ಸ್‌ನಿಂದ ಹಲವಾರು ಕಲಾತಂಡಗಳೊಂದಿಗೆ ನಾಡಪ್ರಭು ಕೆಂಪೇಗೌಡರ ರಥಯಾತ್ರೆ ಮೆರವಣಿಗೆ ಕುವೆಂಪುನಗರ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಅಪಾರ ಜನಸ್ತೋಮದೊಂದಿಗೆ ವಿವೇಕಾನಂದ ವೃತ್ತದವರೆಗೆ ಅದ್ದೂರಿ ಮೆರವಣಿಗೆ ಸಾಗಿತು.

ಮಳೆಯ ನಡುವೆಯೂ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮವನ್ನು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾಮಗಾರಿ ಅಧ್ಯಕ್ಷ ಸಿ.ಜಿ.ಗಂಗಾಧರ್, ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್, ರವಿಕುಮಾರ್ ದೀಪ ಬೆಳಗಿಸಿ ಉದ್ಘಾಟಿಸಿದರು. ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿಯ ಆಯೋಜಕರಾದ ಪೂಜಾ ಟೆಂಟ್‌ನ ಲಿಂಗಪ್ಪ, ಪಾಲಿಕೆ ಮಾಜಿ ಸದಸ್ಯ ಮಾಯಾ ಜಗದೀಶ್, ಕರ್ನಾಟಕ ಸೇನಾಪಡೆಯ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಗಿರೀಶ್ ಗೌಡ, ಸುಮಿತ್ರಾ ರಮೇಶ್, ರಘುರಾಂ, ರಘು ಯೋಗೀಶ್, ಸುಬ್ಬೇಗೌಡ, ದರ್ಶನ್ ಗೌಡ, ಶಿವರಾಂ, ಸೇರಿದಂತೆ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಜೆ 6 ಗಂಟೆಯಿಂದ ರಾತ್ರಿವರೆಗೆ ಕನ್ನಡ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆ.14, ನಾ ಕಸ್ತೂರಿ ಸ್ಮರಣೋತ್ಸವ

ಮೈಸೂರು, ಆ.11(ಜಿಎ)–ನಾ ಕಸ್ತೂರಿ ಹಾಸ್ಯ ರಸಿಕ ವೃಂದ, ಆಕಾಶವಾಣಿ ಮೈಸೂರು ಸಹಯೋಗದಲ್ಲಿ ಆಕಾಶವಾಣಿಯ 90ರ ಸಂಭ್ರಮದ ಭಾಗವಾಗಿ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆ.14ರಂದು ಬೆಳಿಗ್ಗೆ 9.30ಕ್ಕೆ ನಾ.ಕಸ್ತೂರಿ ಸ್ಮರಣೋತ್ಸವ ಆಯೋಜಿಸಲಾಗಿದೆ ಎಂದು ಆಕಾಶವಾಣಿ ಮೈಸೂರು ಉಪನಿರ್ದೇಶಕ ಎಸ್.ಎಸ್.ಉಮೇಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಕೊರವಂಜಿ ಪತ್ರಿಕೆಯಲ್ಲಿ 1942ರಿಂದ ಪ್ರಕಟವಾದ ನಾ ಕಸ್ತೂರಿ ಅವರ ಬರಹಗಳ ಸಮಗ್ರ ಸಂಪುಟ 'ಕೊರವಂಜಿ ಕಸ್ತೂರಿ' ಹಾಗೂ ಎಸ್.ಹೇಮಂತ್‌ಕುಮಾರ್ ಅವರ ಸಂಶೋಧನಾ ಮಹಾಪ್ರಬಂಧ 'ನಾ ಕಸ್ತೂರಿ ಬದುಕು– ಬರಹ' ಕೃತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡುವರು. ನಾ ಕಸ್ತೂರಿ ಹಾಗೂ ಕನ್ನಡ ಹಾಸ್ಯ ಸಾಹಿತ್ಯ ಲೋಕದ ಬಗ್ಗೆ ಅಪರಂಜಿ ಪ್ರಕಾಶಕ ಎಂ.ಶಿವಕುಮಾರ್, ಹೆಚ್‌ಎಂಟಿ ಸಂಸ್ಥೆ ಮಾಜಿ ಚೇರ್ಮನ್ ಎನ್.ರಾಮಾನುಜ, ಲೇಖಕ ಕೆ.ಸಿ.ಶಿವಪ್ಪ, ಚಿಂತಕ ಬೇಲೂರು ರಾಮಮೂರ್ತಿ, ವಾಗ್ಮಿಗಳಾದ ವೈ.ವಿ.ಗುಂಡೂರಾವ್, ಪ್ರೊ.ಎಂ.ಕೃಷ್ಣೇಗೌಡ ಮಾತನಾಡುವರು. ನಿತಿನ್ ರಾಜಾರಾಮ್ ಶಾಸ್ತ್ರಿ ಮತ್ತು ತಂಡದಿಂದ ನಾ ಕಸ್ತೂರಿ ಅವರ ಆಯ್ದ ಕವನಗಳ ಗೀತ ಗಾಯನವನ್ನೂ ಆಯೋಜಿಸಲಾಗಿದೆ ಎಂದರು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.08.2025 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ



■ **ಶ್ರೀ ರಾಘವೇಂದ್ರ ಧಾಮ :** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ, ಮಧ್ಯಾರಾಧನೆ. ಮುಂಜಾನೆ 5 ಗಂಟೆಗೆ ನಿರ್ಮಾಲ್ಯ, 7.30ಕ್ಕೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, 10ಕ್ಕೆ ಅಲಂಕಾರ, 11.30 ಮಹಾ ಮಂಗಳಾರತಿ, 12.00 ಪ್ರಸಾದ ವಿನಿಯೋಗ, ಸಂಜೆ 5.45ರಿಂದ ಸಂಗೀತ ಕಾರ್ಯಕ್ರಮ, 7ಕ್ಕೆ ವಿಶೇಷ ದಾನಿಗಳಿಗೆ ಹಾಗೂ ಸೇವಾಕರ್ತ್ಯಗಳಿಗೆ ಸನ್ಮಾನ, 7.30ಕ್ಕೆ ಪಲ್ಲಕ್ಕಿ ಉತ್ಸವ, ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ, ಸ್ಥಳ: ಶ್ರೀರಾಘವೇಂದ್ರಧಾಮ, ಕಾರ್ತಿಕ ಬಡಾವಣೆ, ರಾಮಕೃಷ್ಣನಗರ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀ ರಾಘವೇಂದ್ರಸ್ವಾಮಿ ಮಠ):** ಶ್ರೀರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಮುಂಜಾನೆ 5.30ಕ್ಕೆ ಸುಪ್ರಭಾತ, 7ರಿಂದ 7.45ರವರೆಗೆ ಮಹಾಪಂಚಾಮೃತ ಅಭಿಷೇಕ. 8ರಿಂದ 10ರವರೆಗೆ ಕನಕಾಭಿಷೇಕ, ಸರ್ವ ಸೇವೆ. ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ. 12.30ರಿಂದ 2ರವರೆಗೆ ಪ್ರಸಾದ ವಿನಿಯೋಗ. ಸಂಜೆ 7ಕ್ಕೆ ಸ್ವಸ್ತಿ ವಾಚನ. ಶ್ರೇಯಃ ಪ್ರಾರ್ಥನೆ, ಮಹಾಮಂಗಳಾರತಿ. ಸಂಜೆ 6.30ರಿಂದ ವಿದುಷಿ ಸ್ಮಿತ ಶ್ರೀ ಕಿರಣ್ ಅವರಿಂದ ಕೊಳಲು ವಾದನ, ವಿದ್ವಾನ್ ಕೇಶವ ಮೋಹನಕುಮಾರ್–ವಯೋಲಿನ್, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ.

■ **ಸಾರ್ವಭೌಮ:** ಶ್ರೀ ಗುರುರಾಘವೇಂದ್ರ ಸ್ವಾಮಿಗಳ 354ನೇ ವರ್ಷದ ಆರಾಧನಾ ಮಹೋತ್ಸವ, ಸಮಿತಿ ವತಿಯಿಂದ 44ನೇ ವರ್ಷದ ಆರಾಧನಾ ಮಹೋತ್ಸವ. ಬೆಳಗ್ಗೆ 6 ಗಂಟೆಗೆ ಸುಪ್ರಭಾತ, 8ರಿಂದ 9ರವರೆಗೆ ಶ್ರೀರಾಘವೇಂದ್ರ ಅಷ್ಟಾಕ್ಷರ ಜಪ, ಬೆಳಗ್ಗೆ 9ಕ್ಕೆ ಶ್ರೀ ದುರ್ಗಾ ಹವನ, 9ರಿಂದ 11ರವರೆಗೆ ಹೋಮ, 11ರಿಂದ 11.30ರವರೆಗೆ ಅಷ್ಟೋತ್ತರ ಸೇವೆ, ಬೆಳಗ್ಗೆ 11.30ರಿಂದ 1ರವರೆಗೆ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6.30ರಿಂದ ಪಂಡಿತ್ ಕುಮಾರ್ ಮರಡೂರ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ರಾಜೇಂದ್ರ ನಾಕೋಡ–ತಬಲಾ, ಸ್ಥಳ: ಸಾರ್ವಭೌಮ, 3ನೇ ಬ್ಲಾಕ್, ಸೋಮನಾಥನಗರ.

■ **ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್ (ಶ್ರೀರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ):** ಶ್ರೀ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಬೆಳಗ್ಗೆ 7 ಗಂಟೆಗೆ ಪಾದಪೂಜೆ, 9ಕ್ಕೆ ಪಂಚಾಮೃತ. ಬೆಳಗ್ಗೆ 10.30ಕ್ಕೆ ರಥೋತ್ಸವ, ಮಧ್ಯಾಹ್ನ 12.30ಕ್ಕೆ ಅಲಂಕಾರ, ಬ್ರಾಹ್ಮಣ ಸೇವೆ. ಸಂಜೆ 7ರಿಂದ 8.30ರವರೆಗೆ ಸಂಗೀತ ಕಾರ್ಯಕ್ರಮ. ಸಂಜೆ 5.30ರಿಂದ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸಂಜೆ 6.30 ರಿಂದ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಆತ್ಮಾರಾಮ್ ನಾಯಕ್–ತಬಲಾ, ಸ್ಥಳ: ಮಠದ ಪ್ರಾಂಗಣ, 12ನೇ ಅಡ್ಡ ರಸ್ತೆ, ವಿವಿ ಮೊಹಲ್ಲಾ.

■ **ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ (ಸುಬ್ಬರಾಯನ ಕೆರೆ)–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಶಾಖೆ:** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಉತ್ತರಾಧನೆ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, 9ಕ್ಕೆ ರಾಜಬೀದಿಗಳಲ್ಲಿ ಮಹಾರಥೋತ್ಸವ, ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ರಿಂದ ಸಿ.ಆರ್.ಸುಘೋಷ್ ಅವರಿಂದ ದಾಸವಾಣಿ, ಸಂಜೆ 7.30ರಿಂದ ಶ್ರೀಮತಿ ಕವಿತಾ ಕಾಮತ್ ಅವರಿಂದ ದಾಸವಾಣಿ, ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ–2025. ಬೆಳಗ್ಗೆ ಗುರುಸಾರ್ವಭೌಮರ ಉತ್ತರಾಧನೆ, ಬೆಳಗ್ಗೆ ಮಹಾರಥೋತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀಕೃಷ್ಣ ಟ್ರಸ್ಟ್, ಶ್ರೀಕೃಷ್ಣಧಾಮ:** ಶ್ರೀ ಗುರು ರಾಘವೇಂದ್ರ ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಮಧ್ಯಾರಾಧನೆ, ಬೆಳಗ್ಗೆ 5.30ರಿಂದ ಸುಪ್ರಭಾತ, 7.30ರಿಂದ ಪಂಚಾಮೃತ ಅಭಿಷೇಕ. 9.30ಕ್ಕೆ ಕನಕಾಭಿಷೇಕ, 11.30ಕ್ಕೆ ಅಲಂಕಾರ ಸೇವೆ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಶ್ರೀಮತಿ ಸ್ಮಜಲ ಗೋರೆ ಮತ್ತು ವೃಂದದವರಿಂದ ಭಕ್ತಿ ಲಹರಿ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 7.30ಕ್ಕೆ ರಥೋತ್ಸವ, ಪಲ್ಲಕ್ಕಿ ಉತ್ಸವ, ಸ್ಥಳ: ಶ್ರೀಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ.

■ **ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್:** ಶ್ರೀ ಗುರು ರಾಘವೇಂದ್ರಸ್ವಾಮಿಗಳ 354ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 6ಕ್ಕೆ ನಿರ್ಮಾಲ್ಯ ವಿಸರ್ಜನೆ ಮತ್ತು ಪಂಚಾಮೃತ, 7ರಿಂದ ಶ್ರೀರಾಯರಿಗೆ ಪಾದಪೂಜೆ, ಕನಕಾಭಿಷೇಕ, ಸರ್ವಸೇವೆ, ಅಲಂಕಾರ, ಬೆಳಗ್ಗೆ 9.30ರಿಂದ ಭಜನೆ, ಬೆಳಗ್ಗೆ 10.30ಕ್ಕೆ ರಥ ಬೀದಿಗಳಲ್ಲಿ ರಥೋತ್ಸವ, ಸಂಜೆ 6ರಿಂದ ರಂಗರಾವ್ ಮೆಮೋರಿಯಲ್ ಅಂಧ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಉಪಕರಣ ವಿತರಣೆ, ವಿದ್ವಾಂಸರು, ಸಾಮಾಜಿಕ ಕಾರ್ಯಕರ್ತರಿಗೆ ಸನ್ಮಾನ, ಅಧ್ಯಕ್ಷತೆ : ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಪ್ರಾಪರ್ಟಿಸ್ ಪಾಲುದಾರ ಜಿ.ಎಸ್.ಶ್ರೀಹರಿ, ಸಂಜೆ 7ರಿಂದ ಸುಹಾಸ್ ಭಾರದ್ವಾಜ್ ತಂಡದವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, 4ನೇ ಹಂತ, ಟಿ.ಕೆ.ಬಡಾವಣೆ.

■ **ಶ್ರೀ ಆದಿಪೂಜಿತ ಗೆಳೆಯರ ಬಳಗ, ಗರಡಿಕೇರಿ, ಶ್ರೀ ಸಿದ್ಧಿವಿನಾಯಕ ಯುವಕರ ಸೇವಾ ಸಂಘ, ಕೆ.ಆರ್. ಆಸ್ಪತ್ರೆ, ಶ್ರೀ ಪಂಚಮುಖಿ ಗಣಪತಿ ಯುವಕರ ಸಂಘ, ಕುರುಬಗೇರಿ :** ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ, ಉಪಸ್ಥಿತರು: ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸಂಸದ ಸುನೀಲ್ ಬೋಸ್, ಉದ್ಘಾಟನೆ: ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಡಿಸಿಸಿ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಮೈಸೂರು ನಗರ ಕಿವುಡ ಮತ್ತು ಮೂಕರ ಪಾಠಶಾಲೆ, ಬೆಳಗ್ಗೆ 9 ರಿಂದ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಅರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಯೋಗ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್, ಗ್ಲೋಬಲ್ ಯೋಗ ಫೋರಂ, ಜೆಎಸ್‌ಎಸ್ ಯೋಗ:** 50ನೇ ಹಿರಿಯರ ರಾಷ್ಟ್ರೀಯ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್–2025. ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ. ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ. ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ. ಆರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ:** 35ನೇ ವರ್ಷದ ವಾರ್ಷಿಕೋತ್ಸವ. ಬೆಳಗ್ಗೆ 7 ಗಂಟೆಗೆ ಗಣಪತಿ ಪೂಜೆ, 10ಕ್ಕೆ ಅಂಗಾರಕ ಸಂಕಷ್ಟಹರ ಗಣಪತಿ ಪೂಜೆ ಪ್ರಯುಕ್ತ ಅಷ್ಟದ್ರವ್ಯ ಸಹಸ್ರಾಹುತಿ ಗಣಪತಿ ಹೋಮ, ಮಧ್ಯಾಹ್ನ 2ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಅಂಗಾರಕ ಸಂಕಷ್ಟಹರ ಗಣಪತಿ ಪೂಜೆ, ಕಥಾಪಠಣ, ರಾತ್ರಿ 8ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಹುಡ್ಕೋ ಒಂದನೇ ಹಂತ, ಬನ್ನಿಮಂಟಪ.

■ **ಸಂಚಲನ, ಮೈಸೂರು, ರಂಗ ರಥ, ಬೆಂಗಳೂರು:** ನಟನಾಭ್ಯಾಸ ಶಿಬಿರ. ಶಿಬಿರದ ನಿರ್ದೇಶಕರು: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 6.30ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ದೀಕ್ಷಾರಂಭ ಪುನಶ್ಚೇತನ ಕಾರ್ಯಕ್ರಮ. ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ. ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಟಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಬೆಂಗಳೂರು ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ ಪ್ರೊ.ಎಲ್.ಎಸ್. ಶಶಿಧರ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣ, ಊಟಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಬ್ರಹ್ಮವಿದ್ಯಾ, ಡಿವಿಜಿ ಬಳಗ ಪ್ರತಿಷ್ಠಾನ, ಜಯತು ಭಾರತಮ್ ಮಹೀಯತಾಂ ಸಂಗೀತಶಾಸ್ತ್ರಂ :** ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ, ಭಾರತೀಯ ಸಂಗೀತ ಶಾಸ್ತ್ರೋತ್ಸವ, ಸಂಜೆ 5.30 ರಿಂದ ಕನ್ನಡ ಕಾವ್ಯವಾಚನ : ವಿದ್ವಾನ್ ಎಂ.ಆರ್. ಶ್ರೀಹರ್ಷ, ಆರೋಗ್ಯ ದಿನಚರಿ : ಡಾ. ಶ್ರೀವತ್ಸ, ವಿದ್ವಾನ್ ಸುಮುಖ ಶ್ರೀವತ್ಸ ಮತ್ತು ಸಹ ಕಲಾವಿದರಿಂದ ಕರ್ನಾಟಕ ಸಂಗೀತ, ಶ್ರೀಕಾಂತಂ ಸಹೋರಿಯರು : ಕು. ನಾಗದೀಪ್ತಿ ಮತ್ತು ಕು. ನಾಗಪ್ರಣತಿ ಮತ್ತು ಸಹ ಕಲಾವಿದರಿಂದ ಕರ್ನಾಟಕ ಸಂಗೀತ ಯುಗಳ ಗಾಯನ, ಲಯಲಹರಿ: ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ ಮತ್ತು ಸಹಕಲಾವಿದರಿಂದ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ. ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಮಾಜ ಸೇವೆ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ODP ಸಂಸ್ಥೆಯ ನಿರ್ದೇಶಕರಾದ ರೆವರೆಂಡ್ ಫಾದರ್ ಅಲೆಕ್ಸ್ ಪ್ರಶಾಂತ್ ಸಿಕ್ವೇರ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಲ್ಲಾಡಿ ಸಹೋದರರ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ– ಮೈಸೂರಿನಲ್ಲಿ ಕೋರಿಯರ್ ಸೇವೆ ಸಲ್ಲಿಸುತ್ತಿರುವ ಮೊದಲ ಮಹಿಳೆ ಅನು ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್ ಬಿ., 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ ಕನ್ನಡದಲ್ಲಿ ಹಾಯ್ಕುಗಳು ಈ ಕುರಿತು ಮಾತನಾಡುತ್ತಾರೆ ಡಾ. ಜಯಪ್ಪ ಹೊನ್ನಾಳಿ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು –ಕೆ.ಬಿ. ಸುನೀತಾ ಆಚಾರ್ಯ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ತ್ಯಾಗರಾಜು–ಸಂತೂರ್ ವಾದನ, 4.00 ಕಥಾಕಾಲಕ್ಷೇಪ–ಮಾಯಾಬಜಾರ್, ಪ್ರಸ್ತುತಿ–ವಿದ್ವಾನ್ ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಆಧುನಿಕ ಮೀನು ಕೃಷಿ ಪದ್ಧತಿಗಳು ಈ ಕುರಿತು ಕೆ.ಆರ್. ಪೇಟೆ ತಾಲೂಕು ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಟಿ.ಡಿ. ಜಗದೀಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಕೆ. ವಿ. ನಾರಾಯಣ ಸ್ವಾಮಿ ಹಾಡುಗಾರಿಕೆ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ


ದೀನ ದಲಿತರ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ, ಅಸಂಘಟಿತ ಸಮಾಜಗಳ,
ಆಶಾಕಿರಣ, ಅಭಿವೃದ್ಧಿ ಹರಿಕಾರ, ಅನೇಕ ಭಾಗ್ಯಗಳನ್ನು ನೀಡಿದ ಭಾಗ್ಯವಿಧಾತ,
5ಗ್ಯಾರಂಟಿಗಳನ್ನು ನೀಡಿದ ಶಕ್ತಿವಂತ ಕರುನಾಡಿಗೆ 2ನೇ ಭಾರಿ ಮುಖ್ಯಮಂತ್ರಿಗಳಾದ
ಶ್ರೀ ಸಿದ್ದರಾಮಯ್ಯ ಅವರಿಗೆ
78ನೇ ವರ್ಷದ
ಜನ್ಮದಿನದ ಶುಭಾಶಯಗಳು
ಡಾ|| ಡಿ. ತಿಮ್ಮಯ್ಯ ವಿಧಾನಪರಿಷತ್ ಸದಸ್ಯರು
ಪ್ರಕಟಣೆ : ರಾಜ್ಯ ಆದಿ ಜಾಂಬವ ಸಂಘ (ರಿ) ಮತ್ತು ಡಾ|| ತಿಮ್ಮಯ್ಯ ಅಭಿಮಾನಿಗಳ ಬಳಗ

ಬಿಜೆಪಿ ಯುವ ಮೋರ್ಚಾದಿಂದ ತಿರಂಗ ಯಾತ್ರೆ

ಮಡಿಕೇರಿ,ಆ.11–'ಹರ್ ಘರ್ ತಿರಂಗಾ' ಯಾತ್ರೆಯ ಅಂಗವಾಗಿ ಬಿಜೆಪಿ ಯುವ ಮೋರ್ಚಾದಿಂದ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ತ್ರಿವರ್ಣ ಧ್ವಜ ಯಾತ್ರೆ ನಡೆಸಲಾಯಿತು.

ನಗರದ ಗಾಂಧಿ ಮೈದಾನದ ಕಾಫಿ ಕೃಪಾ ಕಟ್ಟಡದಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿ ಮುಂಭಾಗ ಹರ್ ಘರ್ ತಿರಂಗಾ ಯಾತ್ರೆಗೆ ಜಿಲ್ಲಾ ಪ್ರಮುಖರು ಚಾಲನೆ ನೀಡಿ ಶುಭ ಹಾರೈಸಿದರು. ಜಿಲ್ಲಾ ಬಿಜೆಪಿ ಯುವ ಮೋರ್ಚಾ, ವಿವಿಧ ಘಟಕಗಳ ಪ್ರಮುಖರು ದ್ವಿಚಕ್ರ ವಾಹನದಲ್ಲಿ ತ್ರಿವರ್ಣ ಧ್ವಜದೊಂದಿಗೆ ದೇಶ ಭಕ್ತಿಯ ಘೋಷ ವಾಕ್ಯಗಳನ್ನು ಮೊಳಗಿಸುವ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದರು. ಭೋಲೋ ಭಾರತ್ ಮಾತಾ ಕೀ ಜೈ, ಹಿಂದುಸ್ಥಾನ್ ಅಮರ್ ರಹೇ ಮತ್ತಿತರ ಘೋಷಣೆಗಳು ಗಮನ ಸೆಳೆದವು.



ಬಿಜೆಪಿ ಯುವ ಮೋರ್ಚಾ ಹರ್ ಘರ್ ತಿರಂಗಾ ಯಾತ್ರೆಯ ಅಂಗವಾಗಿ ಸೋಮವಾರ ತ್ರಿವರ್ಣ ಧ್ವಜ ಯಾತ್ರೆ ನಡೆಸಿತು

ರಾಜಾಸೀಟು ರಸ್ತೆ ರೇಸ್ ಕೋರ್ಸ್ ರೋಡ್, ವಿಜಯ ವಿನಾಯಕ ದೇವಾಲಯ, ಎಸ್‌ಬಿಐ, ಸ್ಕ್ವಾಡ್ರನ್ ಲೀಡರ್ ಎ.ಬಿ ದೇವಯ್ಯ ವೃತ್ತ, ಮೇಜರ್ ಮಂಗೇರಿರ ಮುತ್ತಣ್ಣ ವೃತ್ತ, ಜನರಲ್ ತಿಮ್ಮಯ್ಯ ವೃತ್ತದ ಮೂಲಕ 3 ಕಿಮೀ ಉದ್ದ ಸಾಗಿ ಬಂದ ತಿರಂಗಾ ಯಾತ್ರೆ ಗಾಂಧಿ ಮೈದಾನದ ಬಳಿ ಸಮಾಪ್ತಿಯಾಯಿತು.

ಜಿಲ್ಲಾ ಬಿಜೆಪಿ ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ತಳೂರು ಕಿಶೋರ್ ಕುಮಾರ್, ರಮೇಶ್ ಹೊಳ್ಳ, ಡೀನ್ ಬೋಪಣ್ಣ, ಮನು ಮಂಜುನಾಥ್, ಬಿ.ಕೆ.ಜಗದೀಶ್, ಪಿ.ಎಂ.ರವಿ, ಪಾಂಡೀರ ಪೂಣಚ್ಚ, ಬಿ.ಪಿ.ಡಿಶು, ಬೊಳ್ಳಜಿರ ಅಯ್ಯಪ್ಪ, ಮಡಿಕೇರಿ ನಗರಸಭಾ ಅಧ್ಯಕ್ಷೆ ಕಲಾವತಿ, ಸದಸ್ಯರಾದ ಅರುಣ್ ಶೆಟ್ಟಿ, ಉಮೇಶ್ ಸುಬ್ರಮಣಿ, ಚಂದ್ರು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಆದಿವಾಸಿಗಳ ಪ್ರತಿಭಟನೆ

ಚಾಮರಾಜನಗರ, ಆ. 11–ವಿಶ್ವ ಆದಿವಾಸಿ ದಿನಾಚರಣೆಯನ್ನು ರಾಜ್ಯ ಸರ್ಕಾರದ ವತಿಯಿಂದಲೇ ಆಚರಿಸುವಂತೆ ಒತ್ತಾಯಿಸಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಿಂದ ರಾಜ್ಯ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾಧ್ಯಕ್ಷ ಎನ್.ಸುರೇಶ್, ಪ್ರಧಾನ ಕಾರ್ಯದರ್ಶಿ ಎಸ್.ರಾಜೇಂದ್ರ ನೇತೃತ್ವದಲ್ಲಿ ಪ್ರತಿಭಟನಾನಿರತರು ಮೆರವಣಿಗೆ ಹೋರಾಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಆದಿವಾಸಿ ರಕ್ಷಣಾ ಪರಿಷತ್ ಪ್ರತಿಭಟನೆ ನಡೆಸಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಎನ್.ಸುರೇಶ್, ಪ್ರಧಾನ ಕಾರ್ಯದರ್ಶಿ ಎಸ್.ರಾಜೇಂದ್ರ ಮಾತನಾಡಿ, ವಿಶ್ವಸಂಸ್ಥೆಯು ಇತರ ಸಮುದಾಯಗಳ ಹಬ್ಬಗಳಂತೆ ಕಟ್ಟಕಡೆಯ ಬುಡಕಟ್ಟು ಸಮುದಾಯದ ಆಚರಣೆಗಳು ಆಗಬೇಕು ಎಂದು ತಿಳಿಸಿದೆ ರಾಜ್ಯ ಸರ್ಕಾರ ಸಹ ಆದಿವಾಸಿ ಜನರನ್ನು ಸಹ ಗಣನೆಗೆ ತೆಗೆದುಕೊಂಡು ಪ್ರಾಣಿ ದಿನಾಚರಣೆ, ಹುಲಿ ದಿನಾಚರಣೆ, ಪರಿಸರ ದಿನಾಚರಣೆ ರೀತಿಯಲ್ಲಿಯೇ ಕಾಡಿನಲ್ಲಿ ವಾಸಮಾಡುವ ಬುಡಕಟ್ಟು ಆದಿವಾಸಿ ದಿನಾಚರಣೆ ಮಾಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಆದಿವಾಸಿಗಳು ವಾಸಮಾಡುವ ಕಾಲೋನಿಗಳಲ್ಲಿ ಮನೆಗಳಿಲ್ಲ, ಉತ್ತಮವಾದ ರಸ್ತೆಗಳು, ಮಕ್ಕಳು ಓದಲು ಒಂದು ಒಳ್ಳೆಯ ಶಾಲೆ ಇಲ್ಲ. ಹೀಗಾಗಿ ನಮ್ಮ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಕಷ್ಟ ಆಗುತ್ತಿದೆ ಹಾಗಾಗಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ, ಪ್ರತಿಷ್ಠಿತ ಶಾಲೆಗಳಲ್ಲಿ ಮೂಲ ಆದಿವಾಸಿಗಳಿಗೆ ಪ್ರವೇಶ ಪರೀಕ್ಷೆ ರಹಿತ ಮುಕ್ತ ಪ್ರವೇಶ ನೀಡಬೇಕು. ಸರ್ಕಾರದ ಉಲ್ಲೇಖಿತ ಆದೇಶದಂತೆ ಕೊರಗ, ಜೇನು ಕುರುಬ ಆದಿವಾಸಿಗಳಿಗೆ ಪ್ರವೇಶ ಪರೀಕ್ಷೆ ರಹಿತವಾಗಿ ಮುಕ್ತವಾಗಿ ಪ್ರವೇಶ ನೀಡುತ್ತಿರುವಂತೆ ಉಳಿದ ಬುಡಕಟ್ಟುಗಳಿಗೂ ಈ ಸೌಲಭ್ಯ ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಮಾಧು, ಕುಮಾರ್, ಮಣಿ, ಪಿ.ಬಾಲು, ಹುಚ್ಚಯ್ಯ, ಸಿದ್ದಪ್ಪಾಜಿ, ಇತರರು ಭಾಗವಹಿಸಿದ್ದರು.

ಕೇರಳಕ್ಕೆ ಗಾಂಜಾ ಸಾಗಿಸುತ್ತಿದ್ದ ಇಬ್ಬರ ಬಂಧನ



ಪಿ.ಚೇತನ್



ಅನೀಸ್ ಅಹಮದ್

ಮಡಿಕೇರಿ, ಆ.11– ಹುಣಸೂರು ಕಡೆಯಿಂದ ವಿರಾಜಪೇಟೆ ಮಾರ್ಗವಾಗಿ ಕೇರಳಕ್ಕೆ ನಿಷೇಧಿತ ಮಾದಕ ವಸ್ತು ಗಾಂಜಾ ಸಾಗಿಸುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ವಿರಾಜಪೇಟೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, ಅವರಿಂದ 2.50 ಲಕ್ಷ ರೂ. ಮೌಲ್ಯದ 7 ಕೆ.ಜಿ 872 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ 4 ಲಕ್ಷ ರೂ. ಮೌಲ್ಯದ ಕಾರು, ಮೊಬೈಲ್ ಮತ್ತು ಗಾಂಜಾ ಸಾಗಿಸಲು ಬಳಸಿದ್ದ ಪ್ಲಾಸ್ಟಿಕ್ ಚೀಲವನ್ನು ವಶಪಡಿಸಿಕೊಂಡಿದ್ದಾರೆ.

ಘಟನೆ ಹಿನ್ನೆಲೆ: ಹುಣಸೂರಿನ ವಿಜಯನಗರ ನಿವಾಸಿ ಗುಜರಿ ವ್ಯಾಪಾರಿ ಅನೀಸ್ ಅಹಮದ್(45) ಮತ್ತು ಚಾಲಕ ವೃತ್ತಿಯ ಪಿ.ಚೇತನ್(40) ಎಂಬವರು ಹುಣಸೂರು ಮೂಲಕ ಹಳದಿ ಬೋರ್ಡ್ ಕಾರಿ(ಕೆಎ.01.ಎಜಿ.5549)ನಲ್ಲಿ ಒಟ್ಟು 7.872 ಕೆಜಿ ಗಾಂಜಾವನ್ನು ತುಂಬಿಕೊಂಡು ಕೇರಳದಲ್ಲಿ ಮಾರಾಟ ಮಾಡಲು ಸಾಗಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ವಿರಾಜಪೇಟೆ ಪೊಲೀಸರು ಆರ್ಜಿ ಪೆರುಂಬಾಡಿ ಬಳಿ ಬಂದ ಕಾರನ್ನು ಪರಿಶೀಲನೆಗೆ ಒಳಪಡಿಸಿದಾಗ ಕಾರಿನಲ್ಲಿ 4 ಪ್ಲಾಸ್ಟಿಕ್ ಚೀಲಗಳ ಒಳಗೆ ನಿಷೇಧಿತ ಮಾದಕ ವಸ್ತು ಗಾಂಜಾ ಇರುವುದು ಪತ್ತೆಯಾಗಿದೆ. ಸ್ಥಳದಲ್ಲೇ ಇಬ್ಬರು ಆರೋಪಿಗಳನ್ನು ಬಂಧಿಸಿದ ಪೊಲೀಸರು ಎನ್‌ಡಿಪಿಎಸ್ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಮಹೇಶ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಠಾಣಾಧಿಕಾರಿ ಪ್ರಮೋದ್, ಎಎಸ್‌ಐ ಮಂಜುನಾಥ್ ಸಿಬ್ಬಂದಿಗಳಾದ ಧರ್ಮ, ಗಿರೀಶ್, ಜೋಸ್ ನಿಶಾಂತ್, ಕುಮಾರ್, ಹೇಮಂತ್ ಕುಮಾರ್, ಶಿವಕುಮಾರ್, ಶಿವಶರಣಪ್ಪರವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಭೂಲಕ್ಷ್ಮಿ ವರಾಹಸ್ವಾಮಿ ಕಳಶ ಸ್ಥಾಪನೆ

ಯಳಂದೂರು, ಆ.11 (ವಿ.ನಾಗರಾಜು)–ಪಟ್ಟಣದಲ್ಲಿರುವ ಪ್ರಸಿದ್ಧ ಶ್ರೀ ಭೂಲಕ್ಷ್ಮಿ ವರಾಹಸ್ವಾಮಿಯ ಜೀರ್ಣೋದ್ಧಾರಗೊಂಡ ದೇಗುಲದಲ್ಲಿ ಹೋಮ ಹವನಗಳನ್ನು ಮಾಡಿ ಚತುರ್ದಶ ಕಳಸ ಸ್ಥಾಪನೆ ಮಾಡಲಾಯಿತು.



ಶ್ರೀ ಭೂಲಕ್ಷ್ಮಿ ವರಾಹಸ್ವಾಮಿ ದೇಗುಲದ ಆವರಣದಲ್ಲಿ ಕಳಶ ಪ್ರತಿಷ್ಠಾಪಿಸಲಾಯಿತು.

3 ದಿನಗಳ ಈ ಧಾರ್ಮಿಕ ಕಾರ್ಯಕ್ರಮಗಳಿಗೆ ಬೆಳಿಗ್ಗೆಯಿಂದಲೇ ನಿತ್ಯಹೋಮ, ಬಿಂಬಶುದ್ಧಿ ಜಲಾಧಿವಾಸ, ಕ್ಷೀರಾಧಿವಾಸ, ಪಂಚಗವ್ಯಾಧಿವಾಸ, ಆಧಿವಾಸ ಹೋಮ, ಅಂಗಹೋಮ ಸೇರಿದಂತೆ ವಿವಿಧ ಹೋಮ ಹವನಗಳನ್ನು ನಡೆಸಲಾಯಿತು. ನಂತರ ತೀರ್ಥ ಪ್ರಸಾದಗಳ ವಿನಿಯೋಗ ಹಮ್ಮಿಕೊಳ್ಳಲಾಗಿತ್ತು. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಗೆ ಸೇರಿದ ಈ ದೇಗುಲ ತುಂಬಾ ಶಿಥಿಲಗೊಂಡಿದ್ದರಿಂದ ಕೆಲ ಸಾರ್ವಜನಿಕರ ಸಹಯೋಗದೊಂದಿಗೆ ಪಟ್ಟಣದ ಪ್ರಸಿದ್ಧ ವೈದ್ಯ ಕುಟುಂಬವಾಗಿರುವ ಡಾ. ರಮೇಶ್ ಉಡುಪ, ಡಾ. ಶಶಿಕಲಾ ರಮೇಶ್ ಇದನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ದೇಗುಲದಲ್ಲಿರುವ ಹಳೇ ಅಂಚೆ ಕಚೇರಿ ರಸ್ತೆಯನ್ನು ಬಂದ್ ಮಾಡಲಾಗಿತ್ತು. ಅಲ್ಲದೆ ದೇಗುಲದ ಪಕ್ಕದಲ್ಲಿರುವ ದ್ವಿಪಥ ರಸ್ತೆಯ ಒಂದು ರಸ್ತೆಯನ್ನು ಪೂರ್ಣ ಬಂದ್ ಮಾಡಲಾಗಿತ್ತು. ಹಾಗಾಗಿ ದೊಡ್ಡ ಅಂಗಡಿಬೀದಿ ರಸ್ತೆಯಲ್ಲಿ ಇಂದೂ ಕೂಡ ವಾಹನ ಸವಾರರು ಚಲಿಸಲು ಹರಸಾಹಸ ಪಡುವ ಸ್ಥಿತಿ ನಿರ್ಮಾಣವಾಗಿತ್ತು. ವಿವಿಧ ರಾಜ್ಯ, ಜಿಲ್ಲೆಗಳಿಂದ ಸಾವಿರಾರು ಭಕ್ತರು ಬಂದು ಈ ವಿಧಿಯಲ್ಲಿ ಭಾಗವಹಿಸಿದ್ದರು.

ಸೋಮವಾರ ಧಾರ್ಮಿಕ ಕಾರ್ಯಕ್ರಮಗಳ ಅಂತಿಮ ದಿನವಾಗಿದ್ದು ಮಧ್ಯಾಹ್ನ 2 ಗಂಟೆಯ ನಂತರ ದೇಗುಲದ ಬಾಗಿಲುಗಳು ತೆರೆಯಲಿದೆ ಎಂದು ದೇಗುಲದ ಸೇವಾ ಸಮಿತಿಯ ಸದಸ್ಯರು ಮಾಹಿತಿ ನೀಡಿದರು.

ಸಾವಿನ ಆಘಾತದಿಂದ ಮಗನನ್ನೇ ಹಿಂಬಾಲಿಸಿದ ತಾಯಿ



ಲೋಕೇಶ್



ಮಾದಲಾಂಬಿಕಾ

ಚಾಮರಾಜನಗರ: ವಾರದ ಅಂತರದಲ್ಲಿ ತಾಯಿ, ಮಗ ಸಾವನ್ನಪ್ಪಿರುವ ಘಟನೆ ತಾಲೂಕಿನ ತಾಳವಾಡಿ ಬಳಿಯ ಕರಳವಾಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಲೋಕೇಶ್(44) ಕಳೆದ ಭಾನುವಾರ ಅನಾರೋಗ್ಯದಿಂದ ಮೃತಪಟ್ಟಿದ್ದರು. ಆ.5ರ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು ಈತನ ಸಾವಿನಿಂದ ಆಘಾತಕ್ಕೊಳಗಾಗಿದ್ದ ತಾಯಿ ಮಾದಲಾಂಬಿಕಾ (66) ನಿನ್ನೆ ನಿಧನರಾದರು. ಆ.11ರ ಸೋಮವಾರ ಮಗನ ಸಮಾಧಿಯ ಬಳಿ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ವಾರದ ಅಂತರದಲ್ಲಿ ಕುಟುಂಬದ ಇಬ್ಬರು ಸದಸ್ಯರನ್ನು ಕಳೆದುಕೊಂಡು ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿತ್ತು. ಮೃತ ಲೋಕೇಶ್, ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿ ಅಗಲಿದ್ದರೆ. ಮೃತ ಮಾದಲಾಂಬಿಕಾ ಪತಿ, ಪುತ್ರ ಬಂಧು– ಬಳಗವನ್ನು ಅಗಲಿದ್ದಾರೆ.

ಓಂಕಾರೇಶ್ವರ ದೇವಸ್ಥಾನದ ಗದ್ದೆಯಲ್ಲಿ ಭತ್ತದ ನಾಟಿ

ಮಡಿಕೇರಿ: ಶ್ರೀ ಓಂಕಾರೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ವತಿಯಿಂದ ದೇವಸ್ಥಾನ ಕಲ್ಯಾಣಿ ಮುಂಭಾಗದ ಗದ್ದೆಯಲ್ಲಿ ಭತ್ತದ ನಾಟಿ ಕಾರ್ಯ ಮಾಡಲಾಯಿತು.

ಪ್ರತಿ ವರ್ಷವೂ ಹುತ್ತರಿ ಹಬ್ಬಕ್ಕೆ ಬೇಕಾದ ಕದಿರನ್ನು ಈ ಗದ್ದೆಯಲ್ಲಿ ಬೆಳೆಸಲಾಗುತ್ತಿದ್ದು, ನಗರ ನಿವಾಸಿಗಳು ಹುತ್ತರಿ ಹಬ್ಬದಂದು ದೇವಾಲಯಕ್ಕೆ ಆಗಮಿಸಿ ಕದಿರು ಪಡೆದು ಹುತ್ತರಿ ಹಬ್ಬಾಚರಣೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಉಳುಮೆ ಮಾಡಿ ಹದಗೊಳಿಸಿದ್ದ ಗದ್ದೆಯಲ್ಲಿ ಭತ್ತದ ಕದಿರು ಬೆಳೆಯಲು ನಾಟಿ ಕಾರ್ಯ ಮಾಡಲಾಯಿತು. ಭತ್ತದ ಗದ್ದೆಗೆ ದೇವಾಲಯ ಅರ್ಚಕರು ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಬಳಿಕ ಭತ್ತದ ಸಸಿ ನಾಟಿ ಕಾರ್ಯ ನಡೆಸಲಾಯಿತು.



ಕಲ್ಯಾಣಿ ಮುಂಭಾಗದ ಗದ್ದೆಯಲ್ಲಿ ಭತ್ತದ ನಾಟಿ ಕಾರ್ಯ ಮಾಡಲಾಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ ಸಮ್ಮುಖದಲ್ಲಿ ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿಜಿ ಅನಂತಶಯನ, ಕೊಡವ ಸಮಾಜ ಅಧ್ಯಕ್ಷ ಎಂ.ಪಿ ಮುತ್ತಪ್ಪ, ಕೊಡಗು ಗೌಡ ವಿದ್ಯಾ ಸಮಾಜ ಅಧ್ಯಕ್ಷ ಅಂಬೆಕಲ್ ನವೀನ್, ವ್ಯವಸ್ಥಾಪನ ಸದಸ್ಯ ಪ್ರಕಾಶ್ ಆಚಾರ್ಯ, ಅಂಬೆಕಲ್ ಕುಶಾಲಪ್ಪ, ಕನ್ನಂಡ ಕವಿತಾ, ಕಾರ್ಯನಿರ್ವಾಹಕ ಅಧಿಕಾರಿ ದೇವರಾಜ್, ದೇವಸ್ಥಾನಕ್ಕೆ ಭತ್ತದ ಸಸಿ ನೀಡಿದ ಎಸ್.ಪಿ ವಾಸುದೇವ, ನಗರಸಭಾ ಸದಸ್ಯರಾದ ಕಾಳಚಂಡ ಅಪ್ಪಣ್ಣ, ಸದಾ ಮುದ್ದಪ್ಪ, ದೇವಸ್ಥಾನ ಅರ್ಚಕ ಬಳಗ ಹಾಗೂ ಸಿಬ್ಬಂದಿ ವರ್ಗ ನಾಟಿ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಮಡಿಕೇರಿ ಸುತ್ತಮುತ್ತ ಆ.12ರ ಬೆಳಗ್ಗೆ 10 ರಿಂದ 5 ಗಂಟೆಯವರೆಗೆ ಮಡಿಕೇರಿ ನಗರ, ರಾಜಸೀಟ್, ಗದ್ದಿಗೆ, ಕೋಟೆ, ಕುಂಡಾಮೇಸ್ತ್ರಿ, ಓಂಕಾರೇಶ್ವರ, ಜಿ.ಟಿ.ರಸ್ತೆ, ಕೆಎಸ್‌ಆರ್‌ಟಿಸಿ, ಮೇಕೇರಿ, ಭಾಗಮಂಡಲ, ಬೋಯಿಕೇರಿ, ಸಂಪಾಜೆ, ಗಾಳಿಬೀಡು, ಮಕ್ಕಂದೂರು, ಹೆಬ್ಬೆಟ್ಟಗೇರಿ, ಕೆ.ಬಾಡಗ, ತಾಳತ್ತಮನೆ, ಬೆಟ್ಟಗೇರಿ, ಚೆಟ್ಟಿಮಾನಿ, ಚೇರಂಬಾಣೆ, ಮಕ್ಕಂದೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಭಾವಸಾರ್ ಕ್ಷತ್ರಿಯ ಮಂಡಳಿಯ ಅಧ್ಯಕ್ಷರ ನಿಧನ



ಗುಂಡ್ಲುಪೇಟೆ: ಪಟ್ಟಣದ ಪ್ರಮುಖ ಜವಳಿ ವ್ಯಾಪಾರಿ ವಿ.ಕೆ. ಶಂಕರರಾವ್ ವಾದೋನೆ ಸೋಮವಾರ ಪಟ್ಟಣದಲ್ಲಿ ನಿಧನರಾದರು.

ಮೃತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶಂಕರ್ ರಾವ್ ವಾದೋನೆ ಭಾವಸಾರ್ ಕ್ಷತ್ರಿಯ ಮಂಡಳಿಯ ಅಧ್ಯಕ್ಷರಾಗಿ ಪಟ್ಟಣದ ಶ್ರೀ ಚಾಮುಂಡೇಶ್ವರಿ ದೇವಾಲಯ ನಿರ್ಮಾಣ ಕಾರ್ಯ ದಲ್ಲಿ ಪ್ರಮುಖ ಪಾತ್ರವಹಿಸಿದ್ದರು. 70 ವರ್ಷಕ್ಕೂ ಹೆಚ್ಚು ಕಾಲ ಜವಳಿ ಉದ್ಯಮವನ್ನು ನಡೆಸುತ್ತಿದ್ದರು. ಇವರ ನಿಧನಕ್ಕೆ ಶಾಸಕ ಎಚ್.ಎಮ್. ಗಣೇಶ್ ಪ್ರಸಾದ್, ಮಾಜಿ ಶಾಸಕ ನಿರಂಜನ ಕುಮಾರ್, ಮುಖಂಡರಾದ ಪಿ.ಸುರೇಂದ್ರ, ಪುರಸಭಾ ಸದಸ್ಯ ನಾಗೇಶ್, ಪತ್ರಕರ್ತ ಸೋಮಶೇಖರ್ ಹಾಗೂ ಭಾವಸಾರ್ ಕ್ಷತ್ರಿಯ ಮಂಡಳಿಯ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಧರ್ಮಸ್ಥಳದ ವಿರುದ್ಧ ಸುಳ್ಳು ಸುದ್ದಿ ಹರಿಬಿಡುತ್ತಿರುವವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ಸಾವಿರಾರು ಶ್ರೀಕ್ಷೇತ್ರ ಧರ್ಮಸ್ಥಳ ಭಕ್ತರಿಂದ ಬೃಹತ್ ಪ್ರತಿಭಟನೆ

ಮಂಡ್ಯ, ಆ.11– ಕೋಟ್ಯಾಂತರ ಜನರ ಆರಾಧ್ಯ ದೈವ ಶ್ರೀಮಂಜುನಾಥಸ್ವಾಮಿ ನೆಲೆಸಿರುವ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಿಬಿಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಈ ರೀತಿಯ ಸುಳ್ಳು ಸುದ್ದಿಗಳು ಸಮೂಹ ಮಾಧ್ಯಮಗಳಲ್ಲಿ ಪ್ರಸಾರವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಶ್ರೀಕ್ಷೇತ್ರ ಧರ್ಮಸ್ಥಳದ ಭಕ್ತರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಜಮಾಯಿಸಿದ ಮಹಿಳೆಯರು ಸೇರಿದಂತೆ ನೂರಾರು ಭಕ್ತರು, ಜಯಚಾಮರಾಜೇಂದ್ರ ಒಡೆಯರ್ ವೃತ್ತದವರೆಗೆ ಮೆರವಣಿಗೆಯಲ್ಲಿ ತೆರಳಿ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತು, ಕೆಲ ಕಿಡಿಗೇಡಿಗಳು ಹಿಂದೂಗಳ ಪವಿತ್ರ ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಯಾರೋ ಒಬ್ಬ ಅನಾಮಿಕ ತಾನು ನೂರಾರು ಶವಗಳನ್ನು ಹೂತು ಹಾಕಿದ್ದೇನೆ ಎಂದು ಹೇಳಿದ್ದನ್ನೇ ನಂಬಿ ಸರ್ಕಾರ ಶೋಧ ನಡೆಸುತ್ತಿದೆ ಎಸ್‌ಐಟಿ ತನಿಖಾ ತಂಡ ರಚಿಸಿರುವುದು ಒಳ್ಳೆಯ ಬೆಳವಣಿಗೆ. ಅನಾಮಿಕ ವ್ಯಕ್ತಿ ತೋರಿಸಿದ 16 ಸ್ಥಳಗಳಲ್ಲೂ ಯಾವುದೇ ಶವಗಳಾಗಲಿ, ಅವುಗಳ ಅಸ್ಥಿಪಂಜರವಾಗಲಿ ಸಿಕ್ಕಿಲ್ಲ ಎಂದರು.

ಇದು ಅನ್ಯಧರ್ಮೀಯರು ಹಿಂದೂ ಧರ್ಮದ ಹೂಡಿರುವ ಕುತಂತ್ರವಾಗಿದ್ದು, ಹಿಂದೂ ಧರ್ಮದ ವಿರುದ್ಧ ಅಪಪ್ರಚಾರ ಮಾಡಲೆಂದೇ ಅನಾಮಿಕ ವ್ಯಕ್ತಿ ಸೃಷ್ಟಿಸಲಾಗಿದೆ. ಅಲ್ಲದೆ, ಯೂಟ್ಯೂಬ್‌ನಲ್ಲಿ ಸಮೀರ್ ಎನ್ನುವ ವ್ಯಕ್ತಿ ಧರ್ಮಸ್ಥಳ, ಧರ್ಮಾಧಿಕಾರಿಗಳು ಮತ್ತು ಕುಟುಂಬದ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾನೆ. ಈತನಿಗೆ ಎಲ್ಲಿಂದ ಹಣ ಬರುತ್ತದೆ ಎಂಬುದನ್ನು ಮೊದಲು ಪತ್ತೆ ಹಚ್ಚಬೇಕು. ಅಲ್ಲದೆ, ಅನಾಮಿಕ ಮುಸುಕುಧಾರಿ ವ್ಯಕ್ತಿಯನ್ನು ಮೊದಲು ತನಿಖೆಗೊಳಪಡಿಸಿ ಸತ್ಯಾಸತ್ಯತೆ ತಿಳಿಯಬೇಕೆಂದು ಆಗ್ರಹಿಸಿದರು.

ಭಾರತದ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳವು ಒಂದು. ಸರಿ ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಈ ಕ್ಷೇತ್ರ 'ದಕ್ಷಿಣ ಕಾಶಿ' ಎಂದೇ ನಾಮಾಂಕಿತವಾಗಿದೆ. ರಾಜ್ಯದಲ್ಲಷ್ಟೇ ಅಲ್ಲದೆ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಹೀಗೆ ದೇಶದ ಬೇರೆ ಬೇರೆ ಕಡೆಗಳಿಂದ ನಿತ್ಯ ಶ್ರೀಮಂಜುನಾಥಸ್ವಾಮಿ ದರ್ಶನ ಪಡೆಯಲು 50 ಸಾವಿರದಿಂದ 1 ಲಕ್ಷ ಮಂದಿ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಇದನ್ನು ಸಹಿಸದ ಅನ್ಯಧರ್ಮೀಯರು ಪವಿತ್ರ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಿ ಭಕ್ತರಲ್ಲಿ ಅಪನಂಬಿಕೆ ಬರುವಂತೆ ಮಾಡುತ್ತಿದ್ದಾರೆ. ಮೊದಲು ಇಂತಹವರನ್ನು ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕಳೆದ ಕೆಲವು ವರ್ಷಗಳಿಂದ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಎಂ.ಡಿ.ಸಮೀರ್, ಸಂತೋಷ್ ಶೆಟ್ಟಿ ಟಿ.ಜಯಂತ, ಅಜಯ್, ಅಂಚನ್ ಮತ್ತು ಅವನ ಸಹಚರರು ಸೇರಿಕೊಂಡು ಶ್ರೀಮಂಜುನಾಥಸ್ವಾಮಿ ದೇವಾಲಯ ಹಾಗೂ ಡಿ.ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬಸ್ಥರ ಹೆಸರಿಗೆ ಕಳಂಕ ತರುವಂತಹ ಕೀಳುಮಟ್ಟದ ಭಾಷೆಯನ್ನು ಉಪಯೋಗಿಸಿ ವಿಡಿಯೋಗಳ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿದ್ದಾರೆ. ಶ್ರೀಕ್ಷೇತ್ರ ಧರ್ಮಸ್ಥಳ ದೇವಾಲಯ ಗುರಿಯಾಗಿಸಿಕೊಂಡು ಯಾವುದೇ ದಾಖಲೆಗಳಿಲ್ಲದೆ ನಿರಂತರವಾಗಿ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುತ್ತಿರುವುದರಿಂದ ಶ್ರೀಕ್ಷೇತ್ರದ ಕೋಟ್ಯಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ ಇದರಿಂದಾಗಿ ಈಗಾಗಲೇ ಸಮಾಜದಲ್ಲಿ 2 ಬಣಗಳು ನಿರ್ಮಾಣವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಇದು ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆಯು ಸಮಾಜದಲ್ಲಿ ಉದ್ವಿಗ್ನತೆ ಮತ್ತು ಶಾಂತಿ ಭಂಗಕ್ಕೆ ಕಾರಣವಾಗಬಹುದಾಗಿದೆ.

ಅನಾಮಿಕ ವ್ಯಕ್ತಿಯೋರ್ವ ನೀಡಿದ ದೂರಿನ ಆಧಾರದಲ್ಲಿ ರಾಜ್ಯ ಸರ್ಕಾರ 'ವಿಶೇಷ ತನಿಖಾ ತಂಡ' ರಚಿಸಿ ತನಿಖೆ ನಡೆಸುತ್ತಿರುವುದನ್ನು ಶ್ರೀಕ್ಷೇತ್ರದ ಭಕ್ತವೃಂದದವರಾದ ನಾವೆಲ್ಲರೂ ಗೌರವದಿಂದ ಸ್ವಾಗತಿಸುತ್ತೇವೆ. ಆದರೆ, ಇದೀಗ ಅನಾಮಿಕ ದೂರುದಾರನನ್ನು ಬಳಸಿಕೊಂಡು ಶ್ರೀಕ್ಷೇತ್ರದ ಬಗ್ಗೆ ದಿನಕ್ಕೊಂದು ರೀತಿ ತಮ್ಮ ಯೂಟ್ಯೂಬ್, ಫೇಸ್ ಬುಕ್ ಮುಂತಾದ ಸಾಮಾಜಿಕ ಜಾಲತಾಣದ ಮೂಲಕ ಸುಳ್ಳು ಮಾಹಿತಿಗಳನ್ನು ಬಿತ್ತರಿಸಿ ಭಕ್ತರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ.

ಸೌಜನ್ಯಾಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಮೇಲೆ ಷಡ್ಯಂತ್ರ ಹಾಗೂ ಅಪಪ್ರಚಾರ ಮಾಡುತ್ತಿರುವುದರ ಹಿನ್ನೆಲೆ ಏನು? ಸುಳ್ಳು ಆರೋಪ ಮಾಡಲು ಪ್ರಚೋದಿಸುತ್ತಿರುವವರು ಯಾರು? ಇವರಿಗೆ ಹಣಕಾಸಿನ ನೆರವು ಎಲ್ಲಿಂದ ಬರುತ್ತಿದೆ? ಎಂಬುದನ್ನು ತಿಳಿಯಲು ಸೂಕ್ತ ತನಿಖೆ ನಡೆಸಬೇಕಾಗಿದೆ. ತಮ್ಮ ಮೊಬೈಲ್‌ನಲ್ಲಿ ಸಾಕ್ಷಿಗಳಿವೆ ಎಂದು ವೇದಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಘಂಟಾಘೋಷವಾಗಿ ಭಾಷಣ ಮಾಡುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ಸಮೀರ್, ಟಿ.ಜಯಂತ್, ಸಂತೋಷ್ ಶೆಟ್ಟಿ, ಅಜಯ್ ಅಂಚನ್ ಅವರನ್ನು ವಿಚಾರಣೆಗೆ ಒಳಪಡಿಸಿ ಸತ್ಯಾಸತ್ಯತೆ ಬಯಲಿಗೆ ಎಳೆಯಬೇಕಾಗಿದೆ. ಈ ನಿಟ್ಟಿನಲ್ಲಿ ಈಗಿರುವ ಎಸ್‌ಐಟಿ ಅಥವಾ ಇನ್ನೊಂದು ತನಿಖಾ ತಂಡ ರಚಿಸಿ ತಕ್ಷಣ ತನಿಖೆ ಕೈಗೊಳ್ಳಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವವನ್ನು ಜನಜಾಗೃತಿ ವೇದಿಕೆ ಅಧ್ಯಕ್ಷ ನಾಗಮಂಗಲ ಹನುಮಂತು, ಮುಖಂಡರಾದ ತಗ್ಗಹಳ್ಳಿ ವೆಂಕಟೇಶ್, ಕಾರಸವಾಡಿ ಮಹದೇವ, ಕಲ್ಲಹಳ್ಳಿ ಆನಂದ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ರವೀಂದ್ರ, ಸೇರಿದಂತೆ ನೂರಾರು ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆ.16ರವರೆಗೆ ವಿದ್ಯುತ್ ವ್ಯತ್ಯಯ

ನಾಗಮಂಗಲ, ಆ.11– ಗುಡ್ಡೇನಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊಸದಾಗಿ ಲಿಂಕ್ ಲೈನ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.12 ರಿಂದ 16 ರವರೆಗೆ ಚೀಣ್ಯ, ಎನ್‌ಜೆವೈ ಹಾಗೂ ಎಫ್–7, ಸಾಮಕಹಳ್ಳಿ ಎನ್‌ಜೆವೈ, ಚೀಣ್ಯ, ಬ್ರಹ್ಮದೇವರಹಳ್ಳಿ, ಮಣ್ಣಹಳ್ಳಿ ಹಾಗೂ ಹೊಣಕೆರೆ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀಷಡಕ್ಷರ ಮಹಾಶಿವಯೋಗಿಗಳ ಆರಾಧನಾ ಮಹೋತ್ಸವ

ತಿ.ನರಸೀಪುರ, ಆ.11– ಮಠ ಮಾನ್ಯಗಳು ಹಾಗೂ ಮಠಾಧೀಶರು ಧಾರ್ಮಿಕ ಕೆಲಸ ಮಾಡಲಿಲ್ಲ ಎಂದರೆ ವೀರಶೈವ ಲಿಂಗಾಯತ ಧರ್ಮಕ್ಕೆ ಯಾವುದೇ ಕಿಮ್ಮತ್ತು ಇರುವುದಿಲ್ಲ ಎಂದು ಕನಕಪುರ ಮರಳೇಗವಿ ಮಠದ ಪೀಠಾಧಿಪತಿ ಡಾ.ಶ್ರೀಮುಮ್ಮಡಿ ಶಿವರುದ್ರಸ್ವಾಮಿ ತಿಳಿಸಿದರು.

ತಾಲೂಕಿನ ಸೋಸಲೆ ಗ್ರಾಮದ ಸುಕ್ಷೇತ್ರ ತೋಪಿನ ಮಠದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಶ್ರೀಷಡಕ್ಷರ ಮಹಾಶಿವಯೋಗಿಗಳ 72ನೇ ಆರಾಧನಾ ಮಹೋತ್ಸವ ಹಾಗೂ ಲಿಂಗೈಕ್ಯ ಶ್ರೀವಿರೂಪಾಕ್ಷ ಮಹಾಸ್ವಾಮಿಗಳ 12ನೇ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಕ್ತರಿಗೆ ಆಶೀರ್ವಚನ ನೀಡಿ ಅವರು ಮಾತನಾಡಿದರು.

ವೀರಶೈವ ಲಿಂಗಾಯತ ಸಮಾಜ ಇಂದು ಸಮಾಜದಲ್ಲಿ ಒಳ್ಳೆಯ ಹೆಸರುಗಳಿಸಿ ಮುನ್ನಡೆಯುತ್ತಿದೆ ಎಂದರೆ ಅದು ಸ್ವಾಮೀಜಿಗಳಿಂದ. ಧರ್ಮದ ರಕ್ಷಣೆ ಮಾಡುವುದು ಹಾಗೂ ಧರ್ಮದ ಮಾರ್ಗದರ್ಶನ ನೀಡುತ್ತಿರುವುದು ಮಠಾಧೀಶರು. ಹಾಗಾಗಿ ವೀರಶೈವ ಲಿಂಗಾಯತ ಸಮಾಜದವರು ಮಠಗಳು ಮತ್ತು ಮಠಾಧೀಶರನ್ನು ಜೋಪಾನ ಮಾಡುವುದು ತಮ್ಮ ಕರ್ತವ್ಯ ಎಂದು ಭಾವಿಸಬೇಕು ಎಂದರು.



ಕಾರ್ಯಕ್ರಮದಲ್ಲಿ ಮೈಮುಲ್ ಮಾಜಿ ನಿರ್ದೇಶಕ ಅಶೋಕ್ ಅವರನ್ನು ಡಾ.ಮುಮ್ಮಡಿ ಶಿವರುದ್ರ ಸ್ವಾಮೀಜಿ ಆಶೀರ್ವದಿಸಿದರು.

ಮೈಮುಲ್ ಮಾಜಿ ನಿರ್ದೇಶಕ ಅಶೋಕ್ ಮಾತನಾಡಿ, ಪ್ರಸ್ತುತ ಮಠಗಳು, ದೇವಸ್ಥಾನಗಳು, ಒಂದಲ್ಲಾ ಒಂದು ಸಮಸ್ಯೆಗಳ ಸುಳಿಗೆ ಸಿಲುಕುತ್ತಿವೆ. ಈ ವ್ಯವಸ್ಥೆಗೆ ಕಾರಣ ಯಾರು ಎಂಬುದು ಪ್ರಶ್ನೆಯಾಗಿದೆ. ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಯಾವುದೋ ಸಣ್ಣ ವಿಷಯವನ್ನು ತೆಗೆದುಕೊಂಡು ಇಡೀ ಕ್ಷೇತ್ರದ ಹೆಸರು ಹಾಳು ಮಾಡುವ ಷಡ್ಯಂತ್ರ ನಡೆಯುತ್ತಿದೆ. ಇದರ ಹಿಂದೆ ಸರ್ಕಾರ ಇದೆಯೋ ಅಥವಾ ಮತ್ಯಾರಿದ್ದಾರೋ ಎಂಬುದು ಇಲ್ಲಿ ನಿಗೂಢವಾಗಿದೆ. ಹಾಗಾಗಿ ನಮ್ಮ ಧರ್ಮ, ಸಂಸ್ಕೃತಿ ಉಳಿಯಬೇಕಾದರೆ ಮಠಗಳು, ಸ್ವಾಮೀಜಿಗಳು ಅವಶ್ಯಕವಾಗಿದ್ದಾರೆ. ಈ ನಿಟ್ಟಿನಲ್ಲಿ ವೀರಶೈವ ಸಮಾಜ ಸ್ವಾಮೀಜಿಗಳ ಪರ ನಿಲ್ಲಬೇಕು ಎಂದರು.

ಕಾರ್ಯಕ್ರಮ ಹಿನ್ನೆಲೆಯಲ್ಲಿ ತೋಪಿನ ಮಠದಲ್ಲಿ ಬೆಳಗ್ಗೆ 4 ಗಂಟೆಗೆ ಪೂಜ್ಯರ ಗದ್ದುಗೆಗಳಿಗೆ ರುದ್ರಾಭಿಷೇಕ ಮತ್ತು ಮಹಾ ಮಂಗಳಾರತಿ ನೆರವೇರಿಸಲಾಯಿತು. ಬೆಳಗ್ಗೆ 7 ಗಂಟೆಗೆ ಶ್ರೀ ಕ್ಷೇತ್ರ ಮರಳೇಗವಿ ಮಠದ ಮಠಾಧ್ಯಕ್ಷ ಡಾ.ಮುಮ್ಮಡಿ ಶಿವರುದ್ರ ಸ್ವಾಮೀಜಿ ಶಿವಪೂಜೆ ಹಾಗೂ ಪಾದಪೂಜೆ ಕಾರ್ಯಕ್ರಮ ನಡೆಯಿತು. ನೂರಾರು ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ವೇಳೆ ಷಡಕ್ಷರ ಮಹಾ ಯೋಗಿಗಳ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ಸೋಸಲೆ ತೋಪಿನ ಮಠದ ಇಮ್ಮಡಿ ಷಡಕ್ಷರ ಸ್ವಾಮೀಜಿ, ಚಿದರವಳ್ಳಿ ಗವಿಮಠ, ಮೈಸೂರು–ಚಾಮರಾಜನಗರ ಮಂಡ್ಯ ಮತ್ತು ರಾಮನಗರ ಜಿಲ್ಲೆ ಹರಗುರು ಚರಮೂರ್ತಿಗಳು, ವಕೀಲ ಸಿ.ಎಂ.ಜಗದೀಶ್, ಜೀರ್ಣೋದ್ಧಾರ ಸಮಿತಿಯ ನಟರಾಜು ಹಾಜರಿದ್ದರು.

ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ ಪ್ರಕರಣ

ನಾಲ್ವರ ಬಂಧನ: ನ್ಯಾಯಾಲಯಕ್ಕೆ ಹಾಜರು







ನಂಜನಗೂಡು, ಆ.11– ಹಳೇ ದ್ವೇಷದ ಹಿನ್ನೆಲೆಯಲ್ಲಿ ನಗರದ ಸರ್ಕಾರಿ ಆಸ್ಪತ್ರೆ ಮುಂಭಾಗ ಮಚ್ಚು, ಲಾಂಗ್‌ಗಳಿಂದ ಇಬ್ಬರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು, ನಂಜನಗೂಡು ಪಟ್ಟಣ ಠಾಣೆ ಪೊಲೀಸರು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ವರ ಮಹಾಲಕ್ಷ್ಮಿ ಹಬ್ಬದ ರಾತ್ರಿ ಸರ್ಕಾರಿ ಆಸ್ಪತ್ರೆಗೆ ಆಗಮಿಸಿದ್ದ ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಅಭಿಷೇಕ್ ಹಾಗೂ ನಂಜನಗೂಡಿನ ರವಿ ಎಂಬುವರ ಮೇಲೆ ಮಾರಕಾಸ್ತ್ರಗಳಿಂದ ಗಂಭೀರ ಹಲ್ಲೆ ಮಾಡಿ ನಾಲ್ವರು ಆರೋಪಿಗಳು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಭಾನುವಾರ ನಂಜನಗೂಡಿನ ಸುಭಾಷ್, ಆಕಾಶ್, ಮಂಟಿ ಹಾಗೂ ಓರ್ವ ಅಪ್ರಾಪ್ತ ಸೇರಿದಂತೆ ನಾಲ್ವರನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರು ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಅಪ್ರಾಪ್ತನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಬಳಿ ಕಾಲು ಜಾರಿ ಬಿದ್ದು ಮಗು ಸಾವು

ತಾಯಿ ಆತ್ಮಹತ್ಯೆಗೆ ಯತ್ನ






ಹೆಚ್.ಡಿ.ಕೋಟೆ, ಆ.11– ಮಗು ಸಾವನ್ನಪ್ಪಿದ ದುಃಖ ತಾಳಲಾರದೇ ತಾಯಿಯೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲೂಕಿನ ಕೊಲ್ಲೇಗೌಡನಹಳ್ಳಿ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ಗ್ರಾಮದ ನಿವಾಸಿ ರಸಿಕ ಅವರ ಪುತ್ರಿ ದಿಯಾ(3) ಸಾವನ್ನಪ್ಪಿದ್ದು, ಪತ್ನಿ ಚೈತ್ರಾ(21) ಆತ್ಮಹತ್ಯೆಗೆ ಯತ್ನಿಸಿದವರು. ಇಂದು ಚೈತ್ರಾ ಅವರ ಪತಿ ರಸಿಕ ಹಾಗೂ ಅವರ ಅತ್ತೆ, ಮಾವ ಜಮೀನಿಗೆ ತೆರಳಿದ್ದರು. ಈ ವೇಳೆ ಮನೆಯಲ್ಲಿ ಆಟವಾಡುತ್ತಿದ್ದ ಮೂರು ವರ್ಷದ ಮಗು ದಿಯಾ ಕಾಲು ಜಾರಿ ಬಿದ್ದು ಸಾವನ್ನಪ್ಪಿದೆ. ಮಗು ಸಾವನ್ನಪ್ಪಿದ ದುಃಖ ತಾಳಲಾರದೇ ಚೈತ್ರಾ ಮನೆ ಬಾಗಿಲು ಹಾಕಿ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ಸಂದರ್ಭ ಆಕೆಯ ಚೀರಾಟ ಕೇಳಿ ಗ್ರಾಮಸ್ಥರು ಮನೆ ಬಾಗಿಲು ಮುರಿದು ಆಕೆಯನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಅಲ್ಲದೇ ಮಗುವಿನ ಶವವನ್ನು ಮರಣೋತ್ತರ ಪರೀಕ್ಷೆಗೆ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಠಾಣೆ ಸಿಪಿಐ ಗಂಗಾಧರ್ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿ.ಎನ್.ರಾಮಚಂದ್ರ ನಿಧನ



ಹುಣಸೂರು, ಆ.11– ನಗರದ ಹೆಚ್.ಡಿ.ಕೋಟೆ ಮುಖ್ಯ ರಸ್ತೆಯಲ್ಲಿರುವ ಚಂಪಾ ವೈನ್‌ಸ್ಟೋರ್ ಮಾಲೀಕರು ಹಾಗೂ ಮಂಜುನಾಥ ಬಡಾವಣೆ ನಿವಾಸಿ ಟಿ.ಎನ್. ರಾಮಚಂದ್ರ (75) ಸೋಮವಾರ ನಿಧನರಾದರು.

ಮೃತರು ಪತ್ನಿ ರಾಜೇಶ್ವರಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಲಕ್ಷ್ಮಣತೀರ್ಥ ನದಿ ತೂಗು ಸೇತುವೆ ಬಳಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಂಗೇಗೌಡ



ಭೇರ್ಯ, ಆ.11– ಭೇರ್ಯ ಗ್ರಾಮದ ನಿವೃತ್ತ ಯೋಧ ರಂಗೇಗೌಡ(60) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಸೋಮವಾರ ನಡೆಯಿತು.


ಅಭಿವೃದ್ಧಿ ಹರಿಕಾರ, ಭಾಗ್ಯಗಳ ಗ್ಯಾರಂಟಿ
ಯೋಜನೆಗಳ ಸರದಾರ
ಕರ್ನಾಟಕ ರಾಜ್ಯ ಜನಪ್ರಿಯ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರಿಗೆ
78 ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಹುಟ್ಟು ಹಬ್ಬದ ಪ್ರಯುಕ್ತ ಕೆ.ಆರ್.ಆಸ್ಪತ್ರೆಯ ಕಲ್ಲು ಬಿಲ್ಡಿಂಗ್‌ನ ಒಳ ರೋಗಿಗಳಿಗೆ
(ಹೊದಿಕೆ) ಬೆಡ್‌ಶೀಟ್ ಹಾಗೂ ಸಿಹಿ ವಿತರಣೆ ಕಾರ್ಯಕ್ರಮ
93437 06416
ಕೆ. ಮಾರುತಿ, ಅಧ್ಯಕ್ಷರು,
ಗ್ಯಾರಂಟಿ ಅನುಷ್ಠಾನ ಸಮಿತಿ,
ನಂಜನಗೂಡು ತಾಲ್ಲೂಕು
ಸಿ.ಎಂ. ಶಂಕರ್, ಅಧ್ಯಕ್ಷರು,
ಪಟ್ಟಣ ಬ್ಲಾಕ್ ಕಾಂಗ್ರೆಸ್ ಸಮಿತಿ
ನಂಜನಗೂಡು

ಮೈಸೂರು ಮಿತ್ರ

ಮಹಾರಾಜ ಟ್ರೋಫಿ ಟಿ-20 ಟೂರ್ನಿಯ 4ನೇ ಆವೃತ್ತಿ ಆರಂಭ

ಮೈಸೂರು ವಾರಿಯರ್ಸ್, ಮಂಗಳೂರು ಡ್ರ್ಯಾಗನ್ಸ್ ಶುಭಾರಂಭ

ಬೆಂಗಳೂರು ಬ್ಲಾಸ್ಟರ್ಸ್‌ಗೆ ಆರಂಭಿಕ ಆಘಾತ ನೀಡಿದ ವಾರಿಯರ್ಸ್ ಪಡೆ

ಮೈಸೂರು,ಆ.11(ಪಿಎಂ)– ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿಯ ನಾಲ್ಕನೇ ಆವೃತ್ತಿಯು ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ಚಾಲನೆ ಪಡೆದಿದ್ದು, ಮೊದಲ ದಿನದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ 39 ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಶುಭಾರಂಭ ಮಾಡಿತು.

ನಾಯಕ ಮನೀಶ್ ಪಾಂಡೆ ಅರ್ಧಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ 39 ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಮೈಸೂರು ವಾರಿಯರ್ಸ್ ತಂಡ, ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು.

ಕೊನೆ ಓವರ್‌ಗಳಲ್ಲಿ ಮೈಸೂರು ವಾರಿಯರ್ಸ್ ತಂಡದ ನಾಯಕ ಮನೀಶ್ ಪಾಂಡೆ ಆಕರ್ಷಕ ಪ್ರದರ್ಶನದ ಮೂಲಕ ಅರ್ಧಶತಕ (58) ಬಾರಿಸಿ ಅಜೇಯವಾಗಿ ಉಳಿದರು. ಇದಕ್ಕೂ ಮುನ್ನ ಆರಂಭಿಕ ಆಟಗಾರ ಎಸ್.ಯು.ಕಾರ್ತಿಕ್ 4 ಬಾಲ್‌ಗೆ ಕೇವಲ 3 ರನ್ ಗಳಿಸಿ ಔಟ್ ಆಗುವ ಮೂಲಕ ನಿರಾಸೆ ಮೂಡಿಸಿದರು. ಅಂತೆಯೇ ಸಿ.ಎ.ಕಾರ್ತಿಕ್ 9 ಬಾಲ್‌ಗಳಿಗೆ 4 ಬೌಂಡರಿ ಸೇರಿದಂತೆ 13 ರನ್‌ಗಳನ್ನು ಗಳಿಸಿದಾಗ ಎದುರಾಳಿ ತಂಡದ ವಿದ್ಯಾಧರ್ ಪಾಟೀಲ್ ಬೌಲಿಂಗ್‌ಗೆ ಬೌಲ್ಡ್ ಆದರು. ಎಂ.ವೆಂಕಟೇಶ್ 12 ಬಾಲ್‌ಗೆ 2 ಬೌಂಡರಿ ಸೇರಿದಂತೆ 12 ರನ್‌ಗಳನ್ನು ಗಳಿಸಿ ಪೆವಿಲಿಯನ್‌ಗೆ ಸೇರಿದರು.

ನಂತರ ಬ್ಯಾಟಿಂಗ್‌ಗೆ ಇಳಿದ ಹರ್ಷಿಲ್ ಧರ್ಮಾಣಿ 1 ಸಿಕ್ಸರ್, 2 ಬೌಂಡರಿ ಸೇರಿ 38 ರನ್ ಕೊಡುಗೆ ನೀಡಿ, ಎದುರಾಳಿ ಬೆಂಗಳೂರು ತಂಡದ ಶುಭಾಂಗ್ ಹೆಗ್ಡೆ ಬೌಲಿಂಗ್ ಬೌಲ್ಡ್ ಆದರು. ಕೆ.ಎಸ್.ಲಂಕೇಶ್ 6 ರನ್ ಗಳಿಸಿ ಔಟ್ ಆದರೆ, ತಂಡದ ನಾಯಕ ಮನೀಶ್ ಪಾಂಡೆ 29 ಬಾಲ್‌ಗಳಿಗೆ 4 ಬೌಂಡರಿ,



ಮೈಸೂರು ವಾರಿಯರ್ಸ್ ನಾಯಕ ಪಾಂಡೆ ಬ್ಯಾಟಿಂಗ್ ಅಬ್ಬರ



ಮಂಗಳೂರು ಡ್ರ್ಯಾಗನ್ಸ್ ತಂಡದ ಗೆಲುವಿನ ಸಂಭ್ರಮ

4 ಸಿಕ್ಸರ್ ಸೇರಿ 58 ರನ್‌ಗಳ ಬೃಹತ್ ಮೊತ್ತ ದಾಖಲಿಸಿ ಅಜೇಯವಾಗಿ ಉಳಿದರು. ಸುಮಿತ್ ಕುಮಾರ್ 28 ಬಾಲ್‌ಗಳಿಗೆ 44 ರನ್ ಗಳಿಸಿ ನಾಟೌಟ್ ಆಗಿ ಉಳಿದರು. ಬಳಿಕ ಗುರಿ ಬೆನ್ನಟ್ಟಿದ ಬೆಂಗಳೂರು ಬ್ಲಾಸ್ಟರ್ಸ್ ತಂಡ ಬ್ಯಾಟಿಂಗ್‌ಗೆ ಇಳಿದು 19.2 ಓವರ್‌ಗಳಲ್ಲಿ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ಕೇವಲ 141 ರನ್‌ಗಳನ್ನು ಗಳಿಸಿ ಸೋಲೊಪ್ಪಿಕೊಂಡಿತು.

ಮಂಗಳೂರು ಡ್ರ್ಯಾಗನ್ಸ್‌ಗೆ 33 ರನ್‌ಗಳ ಗೆಲುವು: ಗುಲ್ಬರ್ಗಾ ಮಿಸ್ಟಿಕ್ಸ್ ಹಾಗೂ ಮಂಗಳೂರು ಡ್ರ್ಯಾಗನ್ಸ್ ತಂಡಗಳು ಉದ್ಘಾಟನಾ ಪಂದ್ಯದಲ್ಲಿ ಸೆಣಸಿದರೆ, ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ಹಾಗೂ ರನ್ನರ್ ಅಪ್ ಬೆಂಗಳೂರು ಬ್ಲಾಸ್ಟರ್ಸ್ ಮೊದಲ ದಿನದ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾದವು. ಉದ್ಘಾಟನಾ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಮಂಗಳೂರು ಡ್ರ್ಯಾಗನ್ಸ್ ತಂಡವು 33 ರನ್‌ಗಳ ಭರ್ಜರಿ ಗೆಲುವು ಸಾಧಿಸಿ ಶುಭಾರಂಭ ಮಾಡಿತು. ಇದೇ ಮೊದಲ ಬಾರಿಗೆ ಪ್ರೇಕ್ಷಕರನ್ನು ನಿರ್ಬಂಧಿಸಿ ಪಂದ್ಯಾವಳಿ ನಡೆಸಲಾಗುತ್ತಿದ್ದು, ಇಂದು ನಡೆದ ಮೊದಲ ಪಂದ್ಯದಲ್ಲಿ ಟಾಸ್ ಸೋತರೂ ಆಹ್ವಾನದ ಮೇರೆಗೆ ಮಂಗಳೂರು ಡ್ರ್ಯಾಗನ್ ಬ್ಯಾಟಿಂಗ್‌ಗೆ ಇಳಿಯಿತು.

ಮ್ಯಾಕ್ನೀಲ್ ನೊರೊನ್ಹಾ ಅವರು ಕೇವಲ 28 ಬಾಲ್‌ಗಳಲ್ಲಿ ಅಮೋಘ ಅರ್ಧಶತಕ (53 ರನ್‌ಗಳು) ಬಾರಿಸಿ ತಮ್ಮ ತಂಡದ ಗೆಲುವಿಗೆ ಪೂರಕ ವಾತಾವರಣ ನಿರ್ಮಿಸಿದರು. 3 ಬೌಂಡರಿ, 4 ಸಿಕ್ಸರ್ ಬಾರಿಸಿದ ಇವರು ತಮ್ಮ ತಂಡವು 8 ವಿಕೆಟ್ ನಷ್ಟಕ್ಕೆ ಒಟ್ಟು 180 ರನ್‌ಗಳನ್ನು ದಾಖಲಿಸಲು ಗರಿಷ್ಠ ಮಟ್ಟದ ಕೊಡುಗೆ ನೀಡಿದರು. ಅಲ್ಲದೆ, ಇವರ ತಂಡದ ನಾಯಕ ಶ್ರೇಯಸ್ ಗೋಪಾಲ್ ಮತ್ತು ಕ್ರಾಂತಿ ಕುಮಾರ್ ಅವರು ಗುಲ್ಬರ್ಗ ಮಿಸ್ಟಿಕ್ಸ್ ತಂಡದ ವಿರುದ್ಧ ತಲಾ 3 ವಿಕೆಟ್‌ಗಳನ್ನು ಪಡೆದು ತಮ್ಮ ತಂಡದ ಗೆಲುವಿನ ಹಾದಿಯನ್ನು ಸುಗಮ ಗೊಳಿಸಿದರು.

ದಿನದ ಆರಂಭದಲ್ಲಿ ಮಿಸ್ಟಿಕ್ಸ್‌ನ ಬೌಲಿಂಗ್ ದಾಳಿಯು ಪೃಥ್ವಿರಾಜ್ ನೇತೃತ್ವದಲ್ಲಿ ನಡೆಯಿತು. ಇವರು 21 ರನ್‌ಗಳನ್ನು ನೀಡಿ 3 ವಿಕೆಟ್ ಕಬಳಿಸಿ ಉತ್ತಮ ಪ್ರದರ್ಶನ ನೀಡಿದರು. ವೈಶಾಕ್ ವಿಜಯ್ ಕುಮಾರ್ ಹಾಗೂ ಮೋನಿಶ್ ರೆಡ್ಡಿ ತಲಾ ಎರಡು ವಿಕೆಟ್‌ಗಳನ್ನು ಪಡೆದರು. ಡ್ರ್ಯಾಗನ್ ತಂಡವನ್ನು ಮುನ್ನಡೆಸಲು ಶ್ರೇಯಸ್ ಗೋಪಾಲ್ ಕೊನೆ ಓವರ್‌ಗಳಲ್ಲಿ 20 ರನ್‌ಗಳನ್ನು ಕೊಡುಗೆ ನೀಡಿದ್ದು ಸಹ ತಂಡದ ಗೆಲುವಿಗೆ ನೆರವಾಯಿತು.

ಮಂಗಳೂರು ಡ್ರ್ಯಾಗನ್ಸ್‌ನ ಆರಂಭಿಕರಾದ ಲೋಚನ್ ಎಸ್.ಗೌಡ (27), ಬಿ.ಆರ್.ಶರತ್ (16) ಜೋಡಿಯು ಬಿರುಸಿನ ಆರಂಭ ನೀಡಿ, ಪವರ್ ಪ್ಲೇನಲ್ಲಿ ಗುಲ್ಬರ್ಗಾ ಬೌಲರ್‌ಗಳ ಬೆವರಿಳಿಸಿದರು. ಸಿಕ್ಸರ್–ಬೌಂಡರಿಯೊಂದಿಗೆ ಜೊತೆಯಾಟವಾಡಿ ಗೆಲುವಿನತ್ತ ಸಾಗಲು ಭದ್ರ ಬುನಾದಿ ಹಾಕಿದರು. ಆದರೆ ಪವರ್ ಪ್ಲೇನ ಅಂತಿಮ ಓವರ್‌ನಲ್ಲಿ ಸ್ಪಿನ್ನರ್ ಸೇಕವತ್ ಬೌಲಿಂಗ್‌ಗೆ ಬಿ.ಆರ್.ಶರತ್ ಕ್ಯಾಚ್ ನೀಡಿ ಔಟ್ ಆದರು. ನಂತರ ಎಸೆತದಲ್ಲಿ ಲೋಚನ್ ರನೌಟ್ ಆಗಿ ಪೆವಿಲಿಯನ್ ಸೇರಿದರು. ಬಳಿಕ ಬಂದ ಮ್ಯಾಕ್ನೀಲ್ ನೊರೊನ್ಹಾ ಅಬ್ಬರದ ಬ್ಯಾಟಿಂಗ್ ಮೂಲಕ ತಮ್ಮ ತಂಡದ ಗೆಲುವಿಗೆ ಅತ್ಯುತ್ತಮ ಕೊಡುಗೆ ನೀಡುವಲ್ಲಿ ಯಶಸ್ವಿಯಾದರು.

ಗುರಿ ಬೆನ್ನತ್ತಿದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ ಪ್ರತಿಯಾಗಿ 19.5 ಓವರ್‌ಗಳಲ್ಲಿ ಕೇವಲ 147 ರನ್‌ಗೆ ಸರ್ವ ಪತನ ಕಂಡಿತು. ಸ್ಪಿನ್ನರ್ ಶ್ರೇಯಸ್ ಗೋಪಾಲ್ 4ನೇ ಓವರ್‌ನಲ್ಲಿ ಲವನೀತ್ ಸಿಸೋಡಿಯಾ(26) ಹಾಗೂ ನಿಕಿನ್ ಜೋಶ್(7) ವಿಕೆಟ್ ಪಡೆದು ಗುಲ್ಬರ್ಗ ತಂಡಕ್ಕೆ ಆರಂಭಿಕ ಆಘಾತ ನೀಡಿದರು.

ಬಿರುಸಿನ ಆಟವಾಡುತ್ತಿದ್ದ ಲವನೀತ್ ಸಿಸೋಡಿಯಾ, ಲೋಚನ್ ಗೌಡಗೆ ಕ್ಯಾಚ್ ನೀಡಿ ನಿರ್ಗಮಿಸಿದರೆ, ನಿಕಿನ್ ಜೋಶ್ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರು. ಬಳಿಕ ಮ್ಯಾಕ್ನೀಲ್ ನೊರೊನ್ಹಾ 7ನೇ ಓವರ್‌ನ ಮೂರನೇ ಎಸೆತದಲ್ಲಿ ಸ್ಮರಣ್ ರವಿಚಂದ್ರನ್(11) ಅವರನ್ನು ಬೌಲ್ಡ್ ಮಾಡಿದರು. ಇದರಿಂದ 58 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ಗುಲ್ಬರ್ಗ ಮಿಸ್ಟಿಕ್ಸ್ ಪರದಾಡಿತು. ಅಂತಿಮವಾಗಿ ಗೆಲುವು ಮಂಗಳೂರು ಡ್ರ್ಯಾಗನ್ಸ್‌ಗೆ ಒಲಿಯಿತು.

ಚಾಲನೆ: ಟೂರ್ನಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಉಪಾಧ್ಯಕ್ಷ ಶ್ರೀರಾಮ್ ಚಾಲನೆ ನೀಡಿದರು. ಸಂಸ್ಥೆ ಪದಾಧಿಕಾರಿಗಳಾದ ಮಂಜುನಾಥ್, ಸದಾನಂದ್, ಶಶಿಧರ್, ಹರಿಕೃಷ್ಣ, ಟೈಟಲ್ ಪ್ರಾಯೋಜಕ ರೊನಾಲ್ಡ್ ಡಿಸೋಜಾ ಮತ್ತಿತರರು ಹಾಜರಿದ್ದರು.

ನಿರ್ಬಂಧ: ಫ್ರ್ಯಾಂಚೈಸಿಗಳು, ಕೆಎಸ್‌ಸಿಎ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಕೆಲ ಮಂದಿಗೆ ಮಾತ್ರ ಪಂದ್ಯ ವೀಕ್ಷಣೆಗೆ ಅವಕಾಶ ಒದಗಿಸಲಾಗಿದೆ. ಮೊದಲ ದಿನದ ಪಂದ್ಯಗಳನ್ನು ವೀಕ್ಷಿಸಲು ಕ್ರಿಕೆಟ್ ಪ್ರಿಯರು ಮೈದಾನದ ಬಳಿಯಲ್ಲಿ ಪರದಾಡಿದರು. ಮೈದಾನದತ್ತ ಬಂದಿದ್ದ ಹಲವರು ಪೊಲೀಸರು ವಾಪಸ್ ಕಳುಹಿಸಿದರು. ಅಲ್ಲದೆ, ಮೈದಾನದ ಬಳಿಯ ಮರವೇರಿ ಪಂದ್ಯ ನೋಡಲು ಮುಂದಾಗಿದ್ದರನ್ನು ಕೆಳಗಿಸಿ ಕಳುಹಿಸಲಾಯಿತು.

ಪ್ರಧಾನಿ ಮೋದಿಗೆ ಸ್ವಾಗತ



ನಮ್ಮ ಮೆಟ್ರೋ ಹಳದಿ ಮಾರ್ಗ ಉದ್ಘಾಟನೆಗೆ ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಾಜಿ ಸಚಿವ ಹಾಗೂ ಅರಕಲಗೂಡು ಶಾಸಕ ಎ ಮಂಜು ಆತ್ಮೀಯವಾಗಿ ಸ್ವಾಗತಿಸಿದರು.

ಬಂಡೀಪುರ ಅರಣ್ಯದಲ್ಲಿ ಆನೆಯೊಂದಿಗೆ ಐಲಾಟ ಆಡಲು ಹೋಗಿ ಅದೃಷ್ಟವಶಾತ್ ಪಾರಾದ ವ್ಯಕ್ತಿಗೆ

ದಂಡಾಸ್ತ್ರ; ಜೊತೆಗೆ ಕ್ಷಮಾಪಣೆ!



ದಾಳಿಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ಅರಣ್ಯ ಪ್ರದೇಶದಲ್ಲಿ ಉದ್ಧಟತನ ಮೆರೆದು ಅಪಾಯಕ್ಕೆ ಸಿಲುಕಿದ್ದ ವ್ಯಕ್ತಿಯ ಪತ್ತೆಗೆ ಅರಣ್ಯ ಇಲಾಖೆ

ಮೈಸೂರು, ಆ.11– ಕಾಡಾನೆ ಫೋಟೋ ತೆಗೆಯಲು ಹೋಗಿ ದಾಳಿಗೊಳಗಾಗಿದ್ದ ವ್ಯಕ್ತಿಗೆ, ಅರಣ್ಯಾಧಿಕಾರಿಗಳು 25 ಸಾವಿರ ರೂ. ದಂಡ ವಿಧಿಸಿ, ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡಿದ್ದಾರೆ. ಅಲ್ಲದೆ ಯಾರೂ ಕೂಡ ತನ್ನಂತೆ ವನ್ಯಜೀವಿಗಳಿಗೆ ತೊಂದರೆ ನೀಡದಂತೆ ಮನವಿ ಮಾಡಿದ್ದನ್ನು ಜಾಗೃತಿ ಉದ್ದೇಶಕ್ಕೆ ವಿಡಿಯೋ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ವಲಯ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 181ರಲ್ಲಿ ಆ.10ರಂದು ಸಂಜೆ ಕಾಡಾನೆ ರಸ್ತೆ ದಾಟುವಾಗ ತರಕಾರಿ ಲಾರಿಯಲ್ಲಿ ಒಂದು ಕ್ಯಾರೆಟ್ ಮೂಟೆಯನ್ನು ಎಳೆದು ತಿನ್ನುತ್ತಿದ್ದ ವೇಳೆ ಅದೇ ದಾರಿಯಲ್ಲಿ ಸಂಚರಿಸುತ್ತಿದ್ದ ವ್ಯಕ್ತಿಯೋರ್ವ ಅವನ ಕಾರಿನಿಂದ ಕೆಳಗಿಳಿದು ಆನೆಯ ಮುಂದೆ ಸೆಲ್ಫಿ ಫೋಟೋ ತೆಗೆದುಕೊಂಡಿದ್ದಲ್ಲದೆ ವಿಡಿಯೋ ಮಾಡುವಾಗ ಆತನ ಮೇಲೆ ಆನೆ ದಾಳಿ ಮಾಡಿತ್ತು ಅದೃಷ್ಟವಶಾತ್ ಆತ ಸಾವಿನ ದವಡೆಯಿಂದ ಪಾರಾಗಿದ್ದ. ಅಧಿಕಾರಿಗಳು ಮುಂದಾದರು. ಆತ ನಂಜನಗೂಡು ನಿವಾಸಿ ಆರ್. ಬಸವರಾಜು ಎಂಬುದನ್ನು ಪತ್ತೆ ಮಾಡಿ, ಅವರನ್ನು ಬಂಡೀಪುರ ವಲಯ ಕಚೇರಿಗೆ ಕರೆತಂದು ಮೇಲಧಿಕಾರಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಯಿತು. ತಿಳುವಳಿಕೆ ಇಲ್ಲದೆ ಹೀಗೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದರಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರ ಆದೇಶದಂತೆ ಆತನಿಗೆ 25 ಸಾವಿರ ದಂಡ ವಿಧಿಸಿ, ತಪ್ಪೊಪ್ಪಿಗೆ ಬರೆಸಿಕೊಳ್ಳಲಾಗಿದೆ.

ಅಲ್ಲದೆ ಘಟನೆ ಬಳಿಕ ನಾನು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದೆ. ಆದರೂ ಅರಣ್ಯ ಇಲಾಖೆ ಅಧಿಕಾರಿಗಳು ನನ್ನ ವಿಳಾಸ ಪತ್ತೆ ಮಾಡಿ, ದಂಡ ವಿಧಿಸಿದ್ದಾರೆ. ನನ್ನ ರೀತಿ ಯಾರೂ ತಪ್ಪು ಮಾಡಬೇಡಿ. ವನ್ಯಜೀವಿಗಳಿಗೆ ತೊಂದರೆ ನೀಡಬೇಡಿ. ಹೆದ್ದಾರಿಯಲ್ಲಿ ಸಂಚರಿಸುವಾಗ ಅರಣ್ಯ ಇಲಾಖೆ ಸೂಚನೆಯನ್ನು ಉಲ್ಲಂಘಿಸಬೇಡಿ ಎಂದು ಆ ವ್ಯಕ್ತಿ ಮನವಿ ಮಾಡಿರುವ ವಿಡಿಯೋ ಹಂಚಿಕೊಳ್ಳಲಾಗಿದೆ.

ಸಂದೇಶ್ ನಾಗರಾಜ್–80; ಅರ್ಥಪೂರ್ಣ ಆಚರಣೆಗೆ ನಿರ್ಧಾರ

ಮೈಸೂರು, ಆ.11(ಎಸ್‌ಬಿಡಿ)– ವಿಧಾನ ಪರಿಷತ್ ಮಾಜಿ ಸದಸ್ಯ, ಉದ್ಯಮಿ ಹಾಗೂ ಚಲನಚಿತ್ರ ನಿರ್ಮಾಪಕ ಸಂದೇಶ್ ನಾಗರಾಜು ಅವರು 80 ವಸಂತಗಳನ್ನು ಪೂರೈಸಲಿರುವ ಹಿನ್ನೆಲೆಯಲ್ಲಿ ಆ.31ರಂದು ಮೈಸೂರಿನಲ್ಲಿ ಅರ್ಥಪೂರ್ಣ ಹಾಗೂ ಅದ್ಧೂರಿ ಸಮಾರಂಭವನ್ನು ವ್ಯವಸ್ಥಿತವಾಗಿ ಆಯೋಜಿಸಲು ನಿರ್ಧರಿಸಲಾಗಿದೆ.

ಅಂದು ಬೆಳಗ್ಗೆ 11 ಗಂಟೆಗೆ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನಡೆಸಲುದ್ದೇಶಿಸಿರುವ 'ಶ್ರೀ ಸಂದೇಶ್ ನಾಗರಾಜು–80' ಅದ್ಧೂರಿ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದು, ಈ ಸಂಬಂಧ ಸೋಮವಾರ ಕಾಸ್ಮೋಪಾಲಿಟನ್ ಕ್ಲಬ್ ಅತಿಥಿಗೃಹದ ಸಭಾಂಗಣದಲ್ಲಿ ಶ್ರೀ ಸಂದೇಶ್ ನಾಗರಾಜು 80 ಅಭಿನಂದನಾ ಸಮಿತಿಯ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಿ ಕಾರ್ಯಕ್ರಮದ ರೂಪುರೇಷೆ ಬಗ್ಗೆ ಚರ್ಚಿಸಲಾಯಿತು.



ಮೈಸೂರಿನ ಕಾಸ್ಮೋಪಾಲಿಟನ್ ಕ್ಲಬ್ ಸಭಾಂಗಣದಲ್ಲಿ 'ಶ್ರೀ ಸಂದೇಶ್ ನಾಗರಾಜು–80' ಸಮಾರಂಭದ ಪೂರ್ವಭಾವಿ ಸಭೆ ನಡೆಸಲಾಯಿತು.



ಸಂದೇಶ್ ನಾಗರಾಜು

ಸಭೆಯಲ್ಲಿ ಸಂದೇಶ್ ನಾಗರಾಜ್ ಅವರ ಒಡನಾಡಿಗಳು, ಸ್ನೇಹಿತರು, ಹಿತೈಷಿಗಳು, ಬೆಂಬಲಿಗರು, ಅಭಿಮಾನಿಗಳು ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿ, ಹಲವಾರು ಸಲಹೆಗಳನ್ನು ನೀಡಿದರು.

ಲಕ್ಷ ಜನ ನಿರೀಕ್ಷೆ: ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಸಂದೇಶ್ ನಾಗರಾಜ್ ಅವರು ಒತ್ತಡ ಹೆಚ್ಚಿರುವ ಕ್ಷೇತ್ರಗಳಲ್ಲೇ ಉತ್ತಮ ಸಾಧನೆ ಮಾಡಿದ್ದಾರೆ. ಆ.31ರಂದು ನಡೆಯಲಿರುವ ಸಮಾರಂಭದಲ್ಲಿ ಸಿಎಂ ಪಾಲ್ಗೊಳ್ಳುವುದರಿಂದ ವೇದಿಕೆಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಬಹುದು. ಉಳಿದೆಡೆ ನಿರ್ವಹಣೆಯ ಜವಾಬ್ದಾರಿಯನ್ನು ಯುವಕರಿಗೆ ವಹಿಸಬೇಕು. ಯಾವುದೇ ಗೊಂದಲ–ಗೋಜಲಾಗದಂತೆ ಅತ್ಯಂತ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಬೇಕು. ಇದಕ್ಕಾಗಿ ನಾಲ್ಕೈದು ಉಪಸಮಿತಿ ರಚಿಸಿಕೊಂಡು ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು.

ಅಭಿನಂದನಾ ಗ್ರಂಥ ತನ್ನಿ: ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಗ್ರಾಮೀಣ ಹಿನ್ನೆಲೆಯ ಸಂದೇಶ್ ನಾಗರಾಜ್ ಅವರ ಅಭಿನಂದನಾ ಗ್ರಂಥ ಪ್ರಕಟಿಸಿದರೆ ಅದು ದಾಖಲೆಯಾಗಿ ಉಳಿಯುತ್ತದೆ ಎಂದು ಅಭಿಪ್ರಾಯಿಸಿದರು.

ಸರಳ ಸಜ್ಜನಿಕೆಯ ಸಂದೇಶ್ ನಾಗರಾಜ್ ಅವರ ಸಾಧನೆ ಬಗ್ಗೆ ಬೃಹತ್ ಗ್ರಂಥ ತರಲು ಸಮಯಾವಕಾಶ ಇಲ್ಲದಿರುವುದರಿಂದ ಸಂಕ್ಷಿಪ್ತ ಮಾಹಿತಿಯ ಕಿರು ಹೊತ್ತಿಗೆಯನ್ನಾದರೂ ತರಬೇಕು ಎಂದು ಡಾ.ಎಸ್.ಶಿವರಾಜಪ್ಪ ತಿಳಿಸಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಮಾಜಿ ಮೇಯರ್‌ಗಳಾದ ಬಿ.ಸಿ.ಪ್ರಕಾಶ್, ಟಿ.ಬಿ.ಚಿಕ್ಕಣ್ಣ, ಮಾಜಿ ಉಪಮೇಯರ್ ಮಹದೇವಪ್ಪ, ಡಾ.ರಾಮಕೃಷ್ಣೇಗೌಡ, ವೆಂಕಟಸುಬ್ಬಯ್ಯ, ಎಂಜಿಆರ್ ಅರಸ್, ಬಿ.ಎ.ಶಿವಶಂಕರ್, ಪೈಪಾಲಹಳ್ಳಿ ಮುಕುಂದ, ಜಯರಾಜ್ ಹೆಗ್ಡೆ, ಲೋಕೇಶ್ ರಾವ್ ಅಭಿಪ್ರಾಯ ವ್ಯಕ್ತಪಡಿಸಿದರು. ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಪುಷ್ಪಾ ಜಗನ್ನಾಥ್, ರವಿ ಮಂಚೇಗೌಡನಕೊಪ್ಪಲು, ಬೀಡನಹುಂಡಿ ಸತೀಶ್‌ಗೌಡ, ಚೇತನ್, ರಾಜೇಶ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಬಿಜೆಪಿ ಬೈಕ್ ರ್ಯಾಲಿ



'ಹರ್ ಘರ್ ತಿರಂಗ' ಅಭಿಯಾನದ ಬಗ್ಗೆ ಜಾಗೃತಿ ಮೂಡಿಸಲು ಬಿಜೆಪಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಮಹಿಳಾ ಮತ್ತು ಯುವ ಮೋರ್ಚಾ ಸಹಯೋಗದಲ್ಲಿ ಸೋಮವಾರ ಸಂಜೆ 'ಬೈಕ್ ರ್ಯಾಲಿ' ಹಮ್ಮಿಕೊಳ್ಳಲಾಗಿತ್ತು. ಕ್ಷೇತ್ರದ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜುನಾಥ್, ಪ್ರಧಾನ ಕಾರ್ಯದರ್ಶಿಗಳಾದ ಪದ್ಮನಾಭ, ಮಂಜು ಸಿ., ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ ಗಿರಿಧರ್, ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್, ಯುವ ಮೋರ್ಚಾ ಅಧ್ಯಕ್ಷ ನವೀನ್ ರಾಜ್, ಪ್ರಧಾನ ಕಾರ್ಯದರ್ಶಿ ಪರಮೇಶ್, ಉಪಾಧ್ಯಕ್ಷ ಕಿರಣ್ ಸಿಂಗ್, ಮಹಿಳಾ ಮೋರ್ಚಾ ನಗರಾಧ್ಯಕ್ಷೆ ರೇಣುಕಾ ರಾಜ್, ಪ್ರಧಾನ ಕಾರ್ಯದರ್ಶಿ ಕವಿತಾ ಸಿಂಗ್, ಇಂದ್ರ ಮತ್ತಿತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ಕಿರಿಯನಾದರೂ ತೂಕದಲ್ಲಿ ಭೀಮ 'ಬಲಿಷ್ಠ'

ಗಮನಿಸಬಹುದು. ಕಳೆದ ವರ್ಷ ದಸರಾ ಮುಗಿಸಿ, ವಾಪಸ್ಸಾಗುವ ವೇಳೆ ಇದ್ದ ತೂಕವನ್ನೇ ಕಾಪಾಡಿಕೊಂಡಿವೆ. ಈ ಹಿನ್ನೆಲೆಯಲ್ಲಿ ಪಶು ವೈದ್ಯರೊಂದಿಗೆ ಚರ್ಚಿಸಿ, ಯಾವ ಆನೆಗಳಿಗೆ ಎಷ್ಟು ಪ್ರಮಾಣದ ಪ್ರೋಟೀನ್‌ಯುಕ್ತ ವಿಶೇಷ ಆಹಾರ ನೀಡಬೇಕು ಎಂದು ನಿರ್ಧರಿಸಲಾಗುತ್ತದೆ. ನಾಳೆ (ಆ.12)ಯಿಂದ ಹಂತ ಹಂತವಾಗಿ ಜಂಬೂ ಸವಾರಿ ಮಾರ್ಗದಲ್ಲಿ ಗಜಪಡೆಗೆ ತಾಲೀಮು ನಡೆಸಲಾಗುತ್ತದೆ ಎಂದು ತಿಳಿಸಿದರು.

ನಮಗಿದು ಸಂಭ್ರಮ: ಸಾಯಿರಾಂ ಅಂಡ್ ಕಂ ಮಾಲೀಕ ಗಣೇಶ್ ಪ್ರಸಾದ್ ಮಾತನಾಡಿ, ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ನಮ್ಮ ವೇ ಬ್ರಿಡ್ಜ್ 60 ವರ್ಷಕ್ಕಿಂತಲೂ ಹೆಚ್ಚು ಹಳೆಯದಾದ ವೇ ಬ್ರಿಡ್ಜ್ ಆಗಿದೆ. ಕಳೆದ 35 ವರ್ಷಗಳಿಂದಲೂ ದಸರಾ ಗಜಪಡೆಗೆ ನಮ್ಮ ವೇ ಬ್ರಿಡ್ಜ್‌ನಲ್ಲಿಯೇ ತೂಕದ ಪರೀಕ್ಷೆ ಮಾಡಿಸಲಾಗುತ್ತಿದೆ. ಅರಮನೆಗೆ ದಸರಾ ಗಜಪಡೆ ಪ್ರವೇಶಿಸಿದ ಮರು ದಿನವೇ ನಮ್ಮ ವೇ ಬ್ರಿಡ್ಜ್‌ಗೆ ಕರೆತರುವುದರಿಂದ ನಮಗೆ ಸಂಭ್ರಮ ಮನೆ ಮಾಡಿದೆ. ದಸರಾ ಗಜಪಡೆಯ ಚಟುವಟಿಕೆ ಇಲ್ಲಿಂದಲೇ ಆರಂಭವಾಗುತ್ತಿದೆ ಎಂಬ ಸಂತೋಷ ನಮ್ಮದಾಗಿದೆ. ತಂದೆ ಕಾಲದಿಂದ ಮಾಡುತ್ತಿರುವ ಆನೆಗಳ ತೂಕದ ಸೇವೆಯನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಚಾಮುಂಡೇಶ್ವರಿ ಸೇವೆ ಮಾಡಲು ನಮಗೆ ಅವಕಾಶವಿದೆ ಎಂಬ ಹೆಮ್ಮೆ ಇದೆ ಎಂದರು.

ತೂಕದ ಸಂದರ್ಭದಲ್ಲಿ ಪಶುವೈದ್ಯ ಡಾ.ಆದರ್ಶ್, ಆರ್‌ಎಫ್‌ಓ ನದೀಮ್, ಸಹಾಯಕರಾದ ರಂಗರಾಜ್, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾಸ್ ಲೀಡರ್ ಆಗಿರಲಿಲ್ಲ!

ಹಾಗೂ ಡಾ.ಮನಮೋಹನ್ ಸಿಂಹ್ ಉತ್ತಮ ಆಡಳಿತಗಾರರಾಗಿದ್ದರು. ಆದರೆ, ಅವರು ಮಾಸ್ ಲೀಡರ್ ಆಗಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದರು.

ಯಡಿಯೂರಪ್ಪ ಮಾಸ್ ಲೀಡರ್ ಆಗಿದ್ದಾರೆ, ಆದರೆ ಉತ್ತಮ ಆಡಳಿತಗಾರರಾಗಲಿಲ್ಲ ಹೀಗೆ ಒಂದು ಒಲಿದಷ್ಟೆ ಮತ್ತೊಂದನ್ನು ಅವರು ಪಡೆಯಲು ಸಾಧ್ಯವಾಗುವುದಿಲ್ಲ. ಆದರೆ ಮಾಸ್ ಲೀಡರ್ ಹಾಗೂ ಉತ್ತಮ ಆಡಳಿತಗಾರ ಎಂಬುದು ಸಿದ್ದರಾಮಯ್ಯ ಅವರಲ್ಲಿದೆ. ಈ ಎರಡು ಗುಣ ಮೇಳೈಸಿರುವ ವಿಶಿಷ್ಟ ವ್ಯಕ್ತಿತ್ವದ ರಾಜಕಾರಣಿ ಎಂದು ಹೇಳಿದರು. ಇವೆರಡು ಗುಣಗಳನ್ನು ಸಿದ್ದರಾಮಯ್ಯ ಅವರಿಗೆ ಬೇರೆ ಯಾರೋ ಬೆಳ್ಳಿ ತಟ್ಟೆಯಲ್ಲಿ ಕೊಟ್ಟ ಉಡುಗೊರೆಯಲ್ಲ. ಇದಕ್ಕಾಗಿ ಶ್ರಮವಹಿಸಿ ಹೋರಾಟ ಮಾಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅವರು ನೀಡಿರುವ ಕೊಡುಗೆಗಳನ್ನು ಮೈಸೂರಿಗೆ ಮಾತ್ರ ಸೀಮಿತಗೊಳಿಸಿ ನೋಡಬೇಡಿ, ಕರ್ನಾಟಕ್ಕೂ ಬಹಳಷ್ಟು ಕೊಡುಗೆ ನೀಡಿದ್ದಾರೆ ಎಂಬುದನ್ನು ಮರೆಯಬೇಡಿ ಎಂದು ದಿನೇಶ್ ಅಮೀನ್ ಮಟ್ಟು ಸಲಹೆ ನೀಡಿದರು.

ಎಲ್ಲಾ ಮುಖ್ಯಮಂತ್ರಿಗಳು ಒಂದು ಬಾರಿ ಬಜೆಟ್ ಮೀಟಿಂಗ್ ಮಾಡಿ ನಾಲ್ಕೈದು ವಿಶೇಷ ಕಾರ್ಯಕ್ರಮ ಇರಬೇಕೆಂದು ಅಧಿಕಾರಿಗಳಿಗೆ ಸಲಹೆ ನೀಡಿ ಅವರು ಕೊಟ್ಟ ಬಜೆಟ್ ಓದಿ ಕೈ ತೊಳೆದುಕೊಳ್ಳುತ್ತಾರೆ. ಆದರೆ 16 ಬಾರಿ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಲೆಕ್ಕದಲ್ಲಿ ಪಕ್ಕಾ ಒಂದು ತಿಂಗಳ ಕಾಲ ಅಧಿಕಾರಿಗಳೊಂದಿಗೆ ಮೀಟಿಂಗ್ ಮಾಡುತ್ತಾರೆ. ಜನರ ತೆರಿಗೆಯ ಕಾವಲುಗಾರನಾಗಿರುವ ಕಾರಣ ನಾನು ಮನಸ್ಸಿಗೆ ಬಂದಂತೆ ಹಣ ನೀಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳಿಗೆ ಹೇಳುತ್ತಾರೆ. ಇದು ರಾಜ್ಯದ ಬಗ್ಗೆ ಸಿದ್ದರಾಮಯ್ಯ ಅವರಲ್ಲಿರುವ ಬದ್ಧತೆ ತೋರಿಸುತ್ತದೆ ಎಂದು ಹೇಳಿದರು. 78 ವರ್ಷದ ಸಿದ್ದರಾಮಯ್ಯ ಅವರಿಗಿರುವ ಎನರ್ಜಿ ಬೇರೆ ಯಾವುದೇ ರಾಜಕಾರಣಿಗಿಲ್ಲ. ಇಡೀ ದಿನದ ಆಡಳಿತ ನಿರ್ವಹಣೆಯಲ್ಲಿ ಚುರುಕಿನಿಂದ ಕೆಲಸ ಮಾಡುತ್ತಾರೆ ಎಂದರು. ತಮಗೆ ಎರಡು ಬಾರಿ ಮುಖ್ಯಮಂತ್ರಿ ಪಟ್ಟ ತಪ್ಪಿಸಿದ್ದಕ್ಕಾಗಿ ಹೆಚ್.ಡಿ.ದೇವೇಗೌಡರನ್ನು ಸಿದ್ದರಾಮಯ್ಯ ತೀವ್ರವಾಗಿ ವಿರೋಧಿಸುತ್ತಾರೆ. ಆದರೆ, ಒಕ್ಕಲಿಗ ಸಮುದಾಯದ ವಿರೋಧಿಯಲ್ಲ ಎಂದು ದಿನೇಶ್ ಅಮೀನ್‌ಮಟ್ಟು ಅಭಿಪ್ರಾಯಪಟ್ಟರು.

ಕೆ.ಎನ್.ರಾಜಣ್ಣ ತಲೆದಂಡ

ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನವಾಗಿದೆ ಎಂದು ಆರೋಪಿಸಿ, ಬೃಹತ್ ರ್ಯಾಲಿ ನಡೆಸಿದ್ದರು. ಅವರ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಎಲ್ಲಾ ಸಚಿವರು ಹಾಗೂ ಮುಖಂಡರು ಸಮರ್ಥಿಸಿಕೊಂಡಿದ್ದರು. ಆದರೆ ಕೆ.ಎನ್. ರಾಜಣ್ಣ, 'ಲೋಕಸಭಾ ಚುನಾವಣೆ ಮತದಾರರ ಪಟ್ಟಿ ನಮ್ಮ ಸರ್ಕಾರ ಆಡಳಿತದಲ್ಲಿರುವಾಗಲೇ ಸಿದ್ಧವಾಗಿದೆ. ಆಗ ಎಲ್ಲರೂ ಕಣ್ಮುಚ್ಚಿಕೊಂಡು ಕುಳಿತಿದ್ದು ಈಗ ಮಾತನಾಡಿ ಏನು ಪ್ರಯೋಜನ ನಮ್ಮ ಸರ್ಕಾರದಲ್ಲೇ ನಡೆದಿರುವುದರಿಂದ ನಮಗೆ ನಾಚಿಕೆಯಾಗಬೇಕು' ಎಂದು ಪ್ರತಿಕ್ರಿಯಿಸಿ ಕಾಂಗ್ರೆಸ್ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಿದ್ದರು.

ರಾಜಣ್ಣ ಅವರ ಈ ಹೇಳಿಕೆ ಬಿಜೆಪಿ ಮತ್ತು ಜೆಡಿಎಸ್‌ಗೂ ಅಸ್ತ್ರವಾಯಿತು. ಅದೇ ವೇಳೆ ಕಾಂಗ್ರೆಸ್ ತೀವ್ರ ಮುಜುಗರ ಅನುಭವಿಸಬೇಕಾಯಿತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್, ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಲು ನಿರ್ಧರಿಸಿತ್ತು ಎನ್ನಲಾಗಿದೆ. ವಿಧಾನ ಮಂಡಲ ಅಧಿವೇಶನದ ಮೊದಲ ದಿನವಾದ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧಕ್ಕೆ ಬರುವ ಮಾರ್ಗಮಧ್ಯೆಯೇ ಅವರಿಗೆ ಹೈಕಮಾಂಡ್‌ನಿಂದ ತುರ್ತು ಕರೆ ಬಂದಿದೆ. ಅವರು ವಿಧಾನಸೌಧ ತಲುಪಿದ ನಂತರವೂ ಕೆಲ ನಿಮಿಷಗಳ ಕಾಲ ಕಾರಿನಲ್ಲೇ ಕುಳಿತು, ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂಬ ಖಡಕ್ ಸಂದೇಶ ಮುಖ್ಯಮಂತ್ರಿಗಳಿಗೆ ಬಂದಿತ್ತು ಎಂದು ಹೇಳಲಾಗಿದೆ.

ವಿಧಾನ ಮಂಡಲ ಅಧಿವೇಶನ ಆರಂಭವಾಗಿ ಇತ್ತೀಚೆಗೆ ನಿಧನರಾದ ಗಣ್ಯರಿಗೆ ಸಂತಾಪ ಸೂಚಕ ಮಂಡಿಸುತ್ತಿದ್ದಾಗಲೇ ಸುದ್ದಿ ಮಾಧ್ಯಮಗಳಲ್ಲಿ 'ಕೆ.ಎನ್. ರಾಜಣ್ಣ ರಾಜೀನಾಮೆ' ಸುದ್ದಿ ಬಿತ್ತರವಾಗುತ್ತಿತ್ತು. ಸಂತಾಪ ಸೂಚಕ ಕಲಾಪ ಮುಗಿಯುತ್ತಿದ್ದಂತೆಯೇ ವಿಪಕ್ಷ ನಾಯಕ ಆರ್. ಆಶೋಕ್ ಸೇರಿದಂತೆ ಬಿಜೆಪಿ ಸದಸ್ಯರು ರಾಜಣ್ಣ ರಾಜೀನಾಮೆ ಬಗ್ಗೆ ಪ್ರಶ್ನಿಸಲಾರಂಭಿಸಿದರು. ಈ ವೇಳೆ ಅಶೋಕ್ ಅವರು ರಾಜೀನಾಮೆ ಕೊಟ್ಟ ನಂತರ ಸಚಿವ ಸ್ಥಾನದಲ್ಲಿ ಕುಳಿತಿರಲು ನಿಮಗೆ ನಾಚಿಕೆಯಾಗುವುದಿಲ್ಲವೇ ಎಂದು ರಾಜಣ್ಣ ಅವರನ್ನು ಪ್ರಶ್ನಿಸಿ, ವ್ಯಂಗ್ಯವಾಡಿದರು. ಈ ವೇಳೆ ಕೆರಳಿ ಕೆಂಡವಾದ ರಾಜಣ್ಣ, 'ನನಗೆ ಕಾನೂನು ಸಚಿವರು ಮಾತನಾಡಬೇಡ ಎಂದಿದ್ದಾರೆ. ಅಶೋಕ್ ಅವರೇ ಕೀಳು ಮಟ್ಟದ ಮಾತು ಬೇಡ ನಾನು ರಾಜೀನಾಮೆ ಕೊಟ್ಟಿದ್ದೇನೋ–ಬಿಟ್ಟಿದ್ದೇನೋ, ಸಿಎಂ ಅದಕ್ಕೆಲ್ಲಾ ಉತ್ತರ ಕೊಡುತ್ತಾರೆ. ನಾಚಿಕೆ ಆಗಲ್ವಾ ಎಂದು ಕೇಳ್ತೀರಲ್ಲಾ, ನನಗೆ ನಾಚಿಕೆ ಆಗೋದಿಲ್ಲ. ಕೀಳು ಮಟ್ಟದ ಮಾತುಗಳನ್ನಾಡುವ ನಿಮಗೆ ನಾಚಿಕೆ ಆಗಬೇಕು ಎಂದು ಕಿಡಿಕಾರಿದರು. ಅದೇ ವೇಳೆ ಸ್ಪೀಕರ್ ಯು.ಟಿ. ಖಾದರ್ ಸದನದ ಕಲಾಪವನ್ನು ನಾಳೆಗೆ ಮುಂದೂಡಿದರು.

ನಂತರ ಇತ್ತ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಬಿರುಸಿನ ಚಟುವಟಿಕೆಗಳು ನಡೆಯುತ್ತಿದ್ದರೆ, ಅತ್ತ ಸಚಿವ ಸತೀಶ್ ಜಾರಕಿಹೊಳಿ ಅವರು ಕೆ.ಎನ್. ರಾಜಣ್ಣ ಅವರ ಕೊಠಡಿಗೆ ತೆರಳಿ ಕೆಲ ಸಮಯ ಮಹತ್ವದ ಮಾತುಕತೆ ನಡೆಸಿದ್ದಾರೆ. ಇದಾಗುತ್ತಿದ್ದಂತೆಯೇ ಮುಖ್ಯಮಂತ್ರಿಗಳು ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂಬ ಶಿಫಾರಸು ಪತ್ರವನ್ನು ರಾಜ್ಯಪಾಲರಿಗೆ ರವಾನಿಸಿದರು. ಬಳಿಕ ವಿಧಾನಸೌಧದಿಂದ ಹೊರಬಂದ ಮುಖ್ಯಮಂತ್ರಿಗಳು, ರಾಜಣ್ಣ ರಾಜೀನಾಮೆ ಸಂಬಂಧ ಮಾಧ್ಯಮಗಳು ಪ್ರಶ್ನಿಸಿದಾಗ ಯಾವುದೇ ಉತ್ತರ ನೀಡದೇ ತೆರಳಿದರು.

ಸಂಜೆ ವೇಳೆಗೆ ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವ ರಾಜ್ಯಪಾಲರ ಅಧಿಕೃತ ಆದೇಶ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ತಲುಪಿದ್ದು, ಈ ಆದೇಶದ ಪ್ರತಿಯನ್ನು ಮುಖ್ಯಮಂತ್ರಿಗಳ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಯಿತು. ಕೊನೆಗೆ ರಾಜಣ್ಣ ರಾಜೀನಾಮೆ ನೀಡಿಲ್ಲ, ಅವರನ್ನು ಮುಖ್ಯಮಂತ್ರಿಗಳು ಹೈಕಮಾಂಡ್ ಸೂಚನೆ ಮೇರೆಗೆ ಸಂಪುಟದಿಂದ ವಜಾಗೊಳಿಸಿದ್ದಾರೆ ಎಂಬುದು ಬಹಿರಂಗವಾಯಿತು.

ರಾಜಣ್ಣ ಸಂಪುಟದಿಂದ ವಜಾಗೊಂಡಿರುವುದನ್ನು ಸ್ವತಃ ತಾವೇ ಮಾಧ್ಯಮಗಳ ಮುಂದೆ ಒಪ್ಪಿಕೊಂಡಿದ್ದಾರೆ. ಅಲ್ಲದೇ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ರಾಜಣ್ಣ ವಜಾ ಆಗಿರುವುದನ್ನು ಖಚಿತಪಡಿಸಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದ ಹಿಂದುಳಿದ ವರ್ಗದ ಬಿ. ನಾಗೇಂದ್ರ ಮಹರ್ಷಿ ವಾಲ್ಮೀಕಿ ನಿಗಮದಲ್ಲಿನ ಭ್ರಷ್ಟಾಚಾರ ಪ್ರಕರಣದಲ್ಲಿ ರಾಜೀನಾಮೆ ನೀಡಿದರೆ, ಇದೀಗ ವಾಲ್ಮೀಕಿ ಸಮುದಾಯಕ್ಕೇ ಸೇರಿದ ಕೆ.ಎನ್. ರಾಜಣ್ಣ ತಮ್ಮ ವಿವಾದಾತ್ಮಕ ಹೇಳಿಕೆಗಳಿಂದ ತಲೆದಂಡವಾಗಿದ್ದಾರೆ. ಸಿದ್ದರಾಮಯ್ಯನವರ ಎರಡೂವರೆ ವರ್ಷದ ಅಧಿಕಾರಾವಧಿಯಲ್ಲಿ ಅವರ ಸಂಪುಟದ 2 ವಿಕೆಟ್‌ಗಳು ಉರುಳಿದಂತಾಗಿದೆ.



ನಾನು ಮತ್ತು ಕೆ.ಎನ್. ರಾಜಣ್ಣ ಆತ್ಮೀಯರು. 25 ವರ್ಷಗಳಿಂದ ಒಟ್ಟಿಗೆ ರಾಜಕಾರಣ ಮಾಡಿಕೊಂಡು ಬಂದಿದ್ದೇವೆ. ಇಂದಿನ ಬೆಳವಣಿಗೆ ಮನಸ್ಸಿಗೆ ನೋವು ಉಂಟುಮಾಡಿದೆ. ಸಂಪುಟಕ್ಕೆ ಸಂಬಂಧಪಟ್ಟ ವಿಚಾರಗಳು ಕೆಪಿಸಿಸಿ ಅಧ್ಯಕ್ಷರ ವ್ಯಾಪ್ತಿಗೆ ಬರುವುದಿಲ್ಲ. ಅದು ಮುಖ್ಯಮಂತ್ರಿಗಳ ವ್ಯಾಪ್ತಿಗೆ ಬರುತ್ತದೆ. ನಾವೆಲ್ಲಾ ಹೈಕಮಾಂಡ್ ಸೂಚನೆಯಂತೆ ನಡೆದುಕೊಳ್ಳಬೇಕಾಗುತ್ತದೆ. ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಮಾತನಾಡಿದ್ದೇನೆ. ಅವರಿಗೆ ಹೈಕಮಾಂಡ್‌ನಿಂದ ಏನು ಸೂಚನೆ ಬಂದಿದೆ ಎಂಬುದರ ಎಂಬುದರ ಬಗ್ಗೆ ನನಗೆ ವಿವರವಾಗಿ ಹೇಳಿದ್ದಾರೆ.

- ಡಿ.ಕೆ. ಶಿವಕುಮಾರ್, *ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ*

ಚಿನ್ನ ಕಳ್ಳಸಾಗಣೆ ಪ್ರಕರಣ: ನಟಿ ರನ್ಯಾರಾವ್ ಮಲತಂದೆ ರಾಮಚಂದ್ರ ರಾವ್ ಡಿಜಿಪಿಯಾಗಿ ಮರುನೇಮಕ

ಬೆಂಗಳೂರು, ಆ.11– ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿಯಾಗಿದ್ದಾರೆ ಎಂಬ ಆರೋಪ ಮೇಲೆ ಕಡ್ಡಾಯ ರಜೆಯಲ್ಲಿದ್ದ ಪೊಲೀಸ್



ಮಹಾನಿರ್ದೇಶಕ ಕೆ.ರಾಮಚಂದ್ರ ರಾವ್ ಅವರನ್ನು ರಾಜ್ಯ ಸರ್ಕಾರ ಮರುನೇಮಕ ಮಾಡಿ, ಡಿಜಿಪಿ ರಾವ್ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ.

ಚಿನ್ನ ಕಳ್ಳಸಾಗಣೆ ಪ್ರಕರಣ ಸಂಬಂಧ ನಟಿ ರನ್ಯಾ ರಾವ್ ಅವರ ಬಂಧನದ ನಂತರ ಕಳೆದ ಮಾರ್ಚ್‌ನಲ್ಲಿ ಡಿಜಿಪಿ ರಾಮಚಂದ್ರ ರಾವ್ ಅವರನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ನೇತೃತ್ವದ ರಾಜ್ಯ ಸರ್ಕಾರ ನೇಮಿಸಿದ ತನಿಖಾ ಸಮಿತಿಯು ಪ್ರಶ್ನಿಸಿತು. ಪೊಲೀಸ್ ಪ್ರೋಟೋಕಾಲ್ ಸೇವೆಗಳ ದುರುಪಯೋಗ ಮತ್ತು ಪ್ರಕರಣದಲ್ಲಿ ಡಿಜಿಪಿ ರಾವ್ ಅವರ ಸಂಭಾವ್ಯ ಪಾತ್ರವನ್ನು ತನಿಖೆ ಮಾಡಲು ಗೌರವ್ ಗುಪ್ತಾ ಸಮಿತಿಯನ್ನು ರಚಿಸಲಾಯಿತು. ಹೀಗಾಗಿ ಮಾರ್ಚ್ 15ರಂದು ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಲಾಯಿತು. ವಿಚಾರಣೆಯ ಸಮಯದಲ್ಲಿ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ತಪಾಸಣೆ ಮತ್ತು ಚೆಕ್‌ಔಟ್ ತಪ್ಪಿಸಿಕೊಳ್ಳಲು ರನ್ಯಾ ನಿಯಮಗಳನ್ನು ಉಲ್ಲಂಘಿಸಿ ಪೊಲೀಸ್ ಬೆಂಗಾವಲುಗಳನ್ನು ದುರುಪಯೋಗಪಡಿಸಿಕೊಂಡಿದ್ದಾಳೆ ಎಂದು ತಿಳಿದುಬಂದಿತ್ತು.

ಮುಂದುವರೆದ ಪೊಲೀಸ್ ಕಾರ್ಯಾಚರಣೆ



ಮೈಸೂರು ನಗರ ಪೊಲೀಸರು ಮಾದಕ ವಸ್ತು ಜಾಲ ಭೇದಿಸುವ ಕಾರ್ಯಾಚರಣೆ ಮುಂದುವರೆಸಿದ್ದು, ಸೋಮವಾರ ರಾತ್ರಿ ಮಂಡಿ, ಉದಯಗಿರಿ ಹಾಗೂ ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರದೇಶಗಳಲ್ಲಿ ಶೋಧ ನಡೆಸಿ, ಗಾಂಜಾ ಸೇವನೆ ಮಾಡಿದ್ದ ಆರು ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಇದೇ ವೇಳೆ ಪ್ರಮುಖ ವೃತ್ತ ಜಂಕ್ಷನ್‌ಗಳಲ್ಲಿ ಕಾನೂನು ಜಾಗೃತಿ ಪೋಸ್ಟರ್ ಹಾಗೂ ಬ್ಯಾನರ್ ಅಳವಡಿಸಲಾಯಿತು.

ಡಿಸಿಎಂ ಡಿಕೆಶಿ ಮತ್ತಷ್ಟು ಬಲಾಢ್ಯ!

ಸರ್ಕಾರದಿಂದ ವಿವರಣೆ ಬಯಸಿದರು. ರಾಜೀನಾಮೆ ನಂತರವೂ ರಾಜಣ್ಣ ಸಚಿವರ ಆಸನದಲ್ಲಿ ಕುಳಿತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಮುಖ್ಯಮಂತ್ರಿ ಸದನಕ್ಕೆ ಬಂದ ನಂತರ ರಾಜಣ್ಣ ರಾಜೀನಾಮೆ ಕುರಿತು ಹೇಳಿಕೆ ನೀಡಲಿದ್ದಾರೆ ಎಂದರು. ಸದನದಲ್ಲಿದ್ದ ರಾಜಣ್ಣ, ನಾನು ರಾಜೀನಾಮೆ ನೀಡಿದ್ದ ಪ್ರತಿ ನಿಮ್ಮ ಬಳಿ ಇದ್ದರೆ ಕಳುಹಿಸಿ. ಮುಖ್ಯಮಂತ್ರಿ ಅವರೇ ಬಂದು ಏನು ಹೇಳಬೇಕೋ ಅದನ್ನು ತಿಳಿಸುತ್ತಾರೆ ಎಂದು ವಿಷಯಕ್ಕೆ ತೆರೆ ಎಳೆದರು.


ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗ
ಶೋಷಿತ ಸಮುದಾಯಗಳ ನಾಯಕರು
ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾದ
ಶ್ರೀ ಸಿದ್ಧರಾಮಯ್ಯ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಸೋಮು .ಎನ್
ಅಧ್ಯಕ್ಷರು, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ
ಹಿಂದುಳಿದ ವರ್ಗಗಳ ವಿಭಾಗ
ಎನ್.ಆರ್. ನಾಗೇಶ್
ಅಧ್ಯಕ್ಷರು, ನಗರ ಕಾಂಗ್ರೆಸ್ ಸಮಿತಿ
ಹಿಂದುಳಿದ ವರ್ಗಗಳ ವಿಭಾಗ
ಲಕ್ಷ್ಮಿನಾರಾಯಣ್
ನಗರ ಸಂಚಾಲಕರು
ಓ.ಬಿ.ಸಿ
ಹುಟ್ಟು ಹಬ್ಬದ ಅಂಗವಾಗಿ
ನಿರಾಶ್ರಿತರಿಗೆ ಸಮವಸ್ತ್ರ ವಿತರಿಸಿ
ಸಿಹಿ ಹಂಚಲಾಗುವುದು
ದಿನಾಂಕ : 12-08-2025 ಸಮಯ ಬೆಳಗ್ಗೆ : 10.30 ಕ್ಕೆ
ಕರಾಳಪುರ ನಾಗರಾಜು
ಗ್ರಾಮಾಂತರ ಜಿಲ್ಲಾ ಪ್ರಧಾನ
ಕಾರ್ಯದರ್ಶಿ
ಸ್ಥಳ : ಇಂದಿರಾಗಾಂಧಿ ಕಾಂಗ್ರೆಸ್ ಭವನ, ಮೈಸೂರು
93437 06416

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು